

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವ

# ಸುತ್ತೂರು ವಾರ್ತೆ

ಖಾಸಗಿ ಪ್ರಸಾರ ಸಂಪುಟ : 14 ಸಂಚಿಕೆ : 6 ಪುಟ 8 ಸುತ್ತೂರು ಶ್ರೀಕ್ಷೇತ್ರ ಶನಿವಾರ, 25 ಜನವರಿ 2020


# ಸಾವಯವ ಕೃಷಿಯೇ ನೇಗಿಲಯೋಗಿಯ ಧರ್ಮ

## ಜಾತ್ರಾ ಮಹೋತ್ಸವದ ಕೃಷಿ ವಿಚಾರಸಂಕಿರಣದಲ್ಲಿ ಶ್ರೀ ಬಿ.ಎಲ್. ಸಂತೋಷ್ ಅಭಿಮತ




ಕೃಷಿ ವಿಚಾರ ಸಂಕಿರಣ ಉದ್ಘಾಟನೆ : ಜಗದ್ಗುರುಗಳವರು, ಜಗದ್ಗುರು ಶ್ರೀ ಪುರುಸೋತ್ತಮಾನಂದಪುರಿ ಮಹಾಸ್ವಾಮಿಗಳವರು,ಶ್ರೀ ಸಿದ್ದರಾಜು, ಶ್ರೀ ರುದ್ರೇಗೌಡ, ಶ್ರೀ ಪ್ರತಾಪ್ ಸಿಂಹ, ಶ್ರೀ ಬಿ.ಎಲ್. ಸಂತೋಷ್, ಶ್ರೀ ನಾಗೇಶ್ ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ ಹಾಗೂ ಗಣ್ಯರು.

**ಸುತ್ತೂರು ಶ್ರೀಕ್ಷೇತ್ರ : ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದಲ್ಲಿ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಶುಕ್ರವಾರದ ಕಾರ್ಯಕ್ರಮಗಳು ಜರುಗಿದವು.**

ಕೃಷಿ ವಿಚಾರಸಂಕಿರಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಿ.ಎಲ್. ಸಂತೋಷ್‌ರವರು ಮಾತನಾಡಿ ಕೃಷಿ ಭೂಮಿಯಲ್ಲಿ ವಿಷಯುಕ್ತ ರಾಸಾಯನಿಕಗಳನ್ನು ಬಳಸದೆ, ಸಾವಯವ ಕೃಷಿಯೊಂದಿಗೆ ತೊಡಗಿಸಿಕೊಳ್ಳುವುದು ಅತ್ಯವಶ್ಯಕವಾಗಿದೆ. ರಾಷ್ಟ್ರ ಕವಿ ಕುವೆಂಪುರವರ ನುಡಿಯಂತೆ ಕೃಷಿಯೊಂದು ಧರ್ಮವಾಗಿದೆ. ಕೃಷಿಕನು ಯೋಗಿಯಾಗಿದ್ದಾನೆ. ಈ ನೇಗಿಲಯೋಗಿಯ ಬೆನ್ನಿಗೆ ನಿಂತು ಆತನನ್ನು ಪ್ರೋತ್ಸಾಹಿಸುತ್ತಿರುವ ಸುತ್ತೂರು ಮಠದ ಕಾರ್ಯವನ್ನು ಶ್ಲಾಘಿಸಿದರು.

ಇತ್ತೀಚಿನ ದಿನಗಳಲ್ಲಿ ಜಲಕ್ಷಾಮವು ದೇಶಾದ್ಯಂತ ಸರ್ವಸಾಮಾನ್ಯವಾಗಿದ್ದು, ಲಭ್ಯವಿರುವ ನೀರಿನ್ನು ಬಳಸಿ ಕೃಷಿಯನ್ನು ಸುಧಾರಿಸಿಕೊಳ್ಳಬೇಕಾಗಿದೆ. ಕೃಷಿಯನ್ನು ವೈಜ್ಞಾನಿಕವಾಗಿ ಮಾಡಿ ಹೆಚ್ಚು ಬೆಳೆಗಳನ್ನು ಬೆಳೆಯಲು ಪ್ರಯತ್ನಿಸಿಬೇಕೆಂದರು.

ಆಧುನಿಕ ಜೀವನ ಶೈಲಿಯಲ್ಲಿ ಕೃಷಿ ಉಪಕರಣಗಳಿಗಿಂತ ಎಲೆಕ್ಟ್ರಾನಿಕ್ ಉಪಕರಣಗಳನ್ನು ಹೆಚ್ಚಾಗಿ ಹೊಂದಿರುವುದನ್ನು ಇಂದು ಕಾಣುತ್ತೇವೆ. ಇದರಿಂದ ಕೃಷಿಗೆ ಹಿನ್ನಡೆಯಾಗಿದೆ. ಇದಕ್ಕೆ ಕಾರಣ ಇಂದಿನ ಆಧುನಿಕ ಜೀವನ ಶೈಲಿಯಾಗಿದೆ. ರಾಸಾಯನಿಕ ಕೃಷಿ ಉತ್ಪನ್ನಗಳ ಬಳಕೆಯಿಂದ ಮನುಷ್ಯನ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ ಇದು ತುಂಬಾ ಆಘಾತಕಾರಿಯಾಗಿದೆ. ಈ ನಿಟ್ಟಿನಲ್ಲಿ ಸಾವಯವ ಕೃಷಿ ಉತ್ಪನ್ನಗಳನ್ನು ಬಳಸುವುದರೊಂದಿಗೆ ರೈತರು ಬೆಳೆದ ಬೆಳೆಗಳಿಗೆ ಬೆಂಬಲ ನೀಡಬೇಕೆಂದು ತಿಳಿಸಿದರು. ಸುತ್ತೂರು ಶ್ರೀಗಳ ಸಾಮಾಜಿಕ, ಧಾರ್ಮಿಕ ಕಾರ್ಯಗಳಿಗೆ ವಂದಿಸಿದರು. – ಮಂದಾರ

## ನಾರಿಕೇಳ ಫಲಾಲಂಕಾರ



## ಸಾವಯವ ಸಿರಿಧಾನ್ಯ ಆರೋಗ್ಯಕ್ಕೆ ಮಾನ್ಯ



ಜಾತ್ರಾ ಮಹೋತ್ಸವದಲ್ಲಿ ಸಾವಯವ ಕೃಷಿ ಪದ್ಧತಿ, ಸಿರಿಧಾನ್ಯಗಳು, ಆರೋಗ್ಯಕ್ಕೆ ಉತ್ತಮವಾಗಿರುವ ದ್ವಿದಳಧಾನ್ಯಗಳು ಹಾಗೂ ಜಲ ಸಂರಕ್ಷಣೆಗೆ ಪ್ರಾಮುಖ್ಯತೆ ನೀಡಿರುವುದು ಬಹಳ ಖುಷಿ ತಂದಿದೆ ಎಂದು ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ **ಕೃಷ್ಣ ಬೈರೇಗೌಡರು** ಹೇಳಿದರು.

ಸಾವಯವ ಕೃಷಿ ಮತ್ತು ಜಲ ವೈಜ್ಞಾನಿಕ ಬಳಕೆಯ ವಿಚಾರಸಂಕಿರಣದಲ್ಲಿ ಮಾತನಾಡಿದ ಅವರು, ಸಾವಯವ ಕೃಷಿ ಹಾಗೂ ವೈಜ್ಞಾನಿಕ ಕೃಷಿ ಬೇರೆಯಲ್ಲ ಸಾವಯವ ಪದ್ಧತಿ **2ನೇ ಪುಟಕ್ಕೆ**

## ಕೃಷಿ ಸಂಸ್ಕೃತಿ ಕುರಿತು ಜನಜಾಗೃತಿ



ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಕೃಷಿ ವಿಚಾರಸಂಕಿರಣ ಹಾಗೂ ಗಾಳಿಪಟ ಸ್ಪರ್ಧೆ ಉದ್ಘಾಟನೆ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿದ್ದ ಮಾಜಿ ಸಚಿವರು ಹಾಗೂ ಕೆಪಿಸಿಸಿ ಅಧ್ಯಕ್ಷರಾದ ಶ್ರೀ **ದಿನೇಶ್ ಗುಂಡೂರಾವ್‌ರವರು** ಮಾತನಾಡುತ್ತಾ, ದೇಶದ ಸುರಕ್ಷತೆ ಎಂದರೆ ಕೇವಲ ಸೈನ್ಯವನ್ನು ಬಲಪಡಿಸುವುದು ಅಷ್ಟೆಅಲ್ಲ ಜೊತೆಗೆ ಆ ದೇಶದಲ್ಲಿ ಕೃಷಿಯನ್ನು ಅಭಿವೃದ್ಧಿಪಡಿಸುವುದಾಗಿದೆ. ರೈತರ ಬದುಕನ್ನು ಹಸನಾಗಿಸಲು ಶ್ರೀಕ್ಷೇತ್ರವು ಸಂಶೋಧನೆಗಳೊಂದಿಗೆ **2ನೇ ಪುಟಕ್ಕೆ**

# ಹಾಲೂ-ಹಾಲಾಹಲವಾಗುತ್ತಿರುವ ಕಾಲ

## ಉಪಮುಖ್ಯಮಂತ್ರಿ ಶ್ರೀ ಲಕ್ಷ್ಮಣ ಸವದಿ ಕಿವಿಮಾತು



ಕೃಷಿ ವಿಚಾರಸಂಕಿರಣ ಸಮಾರೋಪ ನುಡಿಗಳನ್ನಾಡಿದ ರಾಜ್ಯದ ಉಪ ಮುಖ್ಯಮಂತ್ರಿಗಳಾದ ಶ್ರೀ ಲಕ್ಷ್ಮಣ್ ಎಸ್. ಸವದಿಯವರು, ರೈತರು ಸಾವಯವ ಕೃಷಿಗೆ ಹೆಚ್ಚು ಒತ್ತುಕೊಡಬೇಕೆಂಬ ಉದ್ದೇಶದಿಂದ ಈ ವಿಚಾರಸಂಕಿರಣವನ್ನು ಏರ್ಪಡಿಸಲಾಗಿದೆ. ಕೃಷಿ ಬೆಳೆಗೆ ರಸಗೊಬ್ಬರಗಳ ನಿಯಂತ್ರಣ ಅತಿ ಅವಶ್ಯಕ. ಏಕೆಂದರೆ ಇದರಿಂದ ಮಣ್ಣು ಫಲವತ್ತತೆಯನ್ನು ಕಳೆದುಕೊಳ್ಳುತ್ತದೆ. ರಸಗೊಬ್ಬರಗಳ ಬಳಕೆಯಿಂದ ಮನುಷ್ಯನ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಕ್ರಿಮಿನಾಶಕ ಬಳಸಿ ಬೆಳೆದ ಬೆಳೆಯನ್ನು ಸೇವಿಸುವುದು ಮಾರಕವಾಗಿದೆ. ಸಮಾಜ ರೈತರನ್ನು ಅವಲಂಬಿಸಿರುವುದರಿಂದ ಸಾವಯವ ಬೆಳೆಗಳನ್ನು ಬೆಳೆಯಲು ರೈತರು ಪ್ರಯತ್ನಿಸಬೇಕೆಂದರು. ಇಂದು ಹಾಲಿನ ಉತ್ಪಾದನೆಯಲ್ಲಿ ಕಲಬೆರಕೆ ನಡೆಯುತ್ತಿರುವುದರಿಂದ ಬಳಕೆ ಮಾಡುವವರು ಜಾಗೃತರಾಗುವಂತೆ ಕಿವಿಮಾತು ಹೇಳಿದರು.

– ರಕ್ಷಿತ.ವಿ ಮತ್ತು ವಿನುವಿರಾಟ್.ಸಿ




ಗಾಳಿಪಟ ಸ್ಪರ್ಧೆ ಉದ್ಘಾಟನೆ: ಜಗದ್ಗುರುಗಳವರು, ಡಾ. ಶ್ರೀ ಪುರುಷೋತ್ತಮಾನಂದಪುರಿ ಮಹಾಸ್ವಾಮಿಗಳವರು, ಶ್ರೀ ಅಲ್ಲಮಪ್ರಭುಸ್ವಾಮಿಗಳು, ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ, ಶ್ರೀ ಸಿದ್ದರಾಜು, ಶ್ರೀ ರುದ್ರೇಗೌಡ, ಶ್ರೀ ಪ್ರತಾಪ್ ಸಿಂಹ, ಶ್ರೀ ನಾಗೇಶ್ ಹಾಗೂ ಗಣ್ಯರು.

# ಇದು ಹಕ್ಕಿ ಅಲ್ಲ... ಆದ್ರ ಹಾರ್‍ತೈತಲ್ಲ... !

ಜಾತ್ರಾ ಮಹೋತ್ಸವದ ಅಂಗವಾಗಿ ಪ್ರತಿ ವರ್ಷದಂತೆ ಈ ವರ್ಷವು ಶಾಲಾ ಕ್ರೀಡಾಂಗಣದ ಆವರಣದಲ್ಲಿ ಗಾಳಿಪಟ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಗೋರಂಟಿ ಪಟ, ವೃತ್ತದ ಪಟ, ನೂರು ಜಂಟಿ ಪಟ ಮುಂತಾದ ಗಾಳಿಪಟಗಳು ಬಾನಂಗಳದಲ್ಲಿ ಬಣ್ಣ ಬಣ್ಣದ ಚಿತ್ತಾರವನ್ನು ಮೂಡಿಸಿ ಜನರ ಮನಸ್ಸನ್ನು ಸೆಳೆದವು. ಗಾಳಿಪಟ ಸ್ಪರ್ಧೆಯನ್ನು ಆಯೋಜಿಸುವುದರ ಮೂಲಕ ಗ್ರಾಮೀಣ ಸೊಗಡನ್ನು ಬಿಂಬಿಸುವ ಉದ್ದೇಶವಾಗಿದೆ. ಸುಮಾರು ಎಂಟು ವರ್ಷಗಳಿಂದ ನಡೆಯುತ್ತಿರುವ ಈ ಸ್ಪರ್ಧೆಗೆ ಚಾಮರಾಜನಗರ, ಮೈಸೂರು, ಮಂಡ್ಯ, ಬೆಂಗಳೂರು, ಧಾರವಾಡ ಜಿಲ್ಲೆಗಳಿಂದ ಸುಮಾರು 100ಕ್ಕೂ ಹೆಚ್ಚು ಪ್ರಾಥಮಿಕ, ಪ್ರೌಢಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. ಈ ಬಾರಿ ಮಹಿಳೆಯರು ಪಾಲ್ಗೊಂಡಿದದ್ದು ವಿಶೇಷವಾಗಿತ್ತು. ತೀರ್ಪುಗಾರರಾಗಿ ಆಗಮಿಸಿದ್ದ ಬೆಂಗಳೂರಿನ ಕೈಟ್ ಕ್ಲಬ್ ಸದಸ್ಯರಾದ ವಿ.ಕೆ. ರಾವ್ ಮತ್ತು ತಂಡದವರು ವೈವಿಧ್ಯಮಯ ಡ್ರಾಗನ್ ಗಾಳಿಪಟಗಳನ್ನು ಪ್ರದರ್ಶಿಸಿಸುವುದರ ಮೂಲಕ ಜನರ ಕಣ್ಮನಗಳನ್ನು ತಣಿಸಿದರು.

– ಸಂಕ್ರಾಂತಿ ಬಸವಟ್ಟಿ ಮತ್ತು ಕೃಷ್ಣ ಮಾಧುರಿ



ಗಗನಮುಖಿ ಗಾಳಿಪಟ ಡ್ರ್ಯಾಗನ್

## ಕೃಷಿ ಸಂಸ್ಕೃತಿ ಕುರಿತು ಜನಜಾಗೃತಿ

(ಮೊದಲ ಪುಟದಿಂದ)

ನಿರಂತರ ಚಿಂತನೆಯನ್ನು ನಡೆಸಿದ್ದು ಈ ಮೂಲಕ ಮಠದಲ್ಲಿ ಕೃಷಿಪರ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ಶ್ಲಾಘನೀಯವಾಗಿದೆ. ಸೀಮಿತವಾದ ಜಲ ವ್ಯವಸ್ಥೆಯಲ್ಲಿ ನವ ತಂತ್ರಜ್ಞಾನದ ಅಳವಡಿಕೆಯೊಂದಿಗೆ ಸರ್ಕಾರ ಜಾರಿಗೆ ತಂದಿರುವ ಕೃಷಿಪರವಾದ ಮೊಬೈಲ್ ಕಿರು ತಂತ್ರಾಂಶಗಳ ಮುಖ್ಯ ಮಾರ್ಗದರ್ಶನದೊಂದಿಗೆ ಯಶಸ್ಸು ಕಾಣಲು ಯತ್ನಿಸಬೇಕಾಗಿದೆ ಎಂದು ತಿಳಿಸಿದರು. ಭಾರತದಲ್ಲಿ ಮಾರುಕಟ್ಟೆ ವ್ಯವಸ್ಥೆಯ ಲಭ್ಯತೆ, ದೋಷಗಳನ್ನು ಸಾಕಷ್ಟುಮಟ್ಟಿಗೆ ಸರ್ಕಾರವು ಸುಧಾರಿಸಬೇಕು. ಜಲಸಂರಕ್ಷಣೆ ಮತ್ತು ಕೃಷಿ ಸಂಸ್ಕೃತಿಯನ್ನು ಕುರಿತು ಜನ ಜಾಗೃತಿ ಮೂಡಿಸುವುದು ಅತ್ಯಗತ್ಯವಾಗಿದ್ದು, ಈ ದಿಶೆಯಲ್ಲಿ ಶ್ರೀಮಠವು ವಿವಿಧ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಮೂಲಕ ನಿರಂತರವಾಗಿ ಶ್ರಮಿಸುತ್ತಿದೆ ಎಂದು ನುಡಿದರು. – **ಅನುಷ .ಆರ್**

## ಶ್ರೀ ಮಹದೇಶ್ವರ ಕೊಂಡೋತ್ಸವ



## ಸುತ್ತೂರು ಜಾತ್ರೆ...

# ಅಕ್ಷಯಪಾತ್ರೆ

ಕೃಷಿ ವಿಚಾರಸಂಕಿರಣ ಮತ್ತು ಗಾಳಿಪಟ ಉದ್ಘಾಟನೆ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ವಿಧಾನಪರಿಷತ್



ಸದಸ್ಯರಾದ **ಶ್ರೀ ಕೆ.ಸಿ. ಕೊಂಡಯ್ಯನವರು** ಮಾತನಾಡಿ, ಸುತ್ತೂರು ಶ್ರೀಮಠದ ಶಿಕ್ಷಣ ಸಂಸ್ಥೆಗಳು ಉತ್ತಮ ಶಿಕ್ಷಣ ನೀಡುವುದರ ಜೊತೆಗೆ ಸುಸಜ್ಜಿತ ಕಟ್ಟಡಗಳಿಂದ ಕೂಡಿದೆ. ಯಾವುದೇ ಜಾತಿ, ಮತಭೇದವಿಲ್ಲದೆ ಎಲ್ಲರಿಗೂ ಶಿಕ್ಷಣವನ್ನು ನೀಡುತ್ತಿದೆ. ಶ್ರೀಮಠವು ವಿದೇಶಗಳಲ್ಲಿಯೂ ಕೂಡ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದೆ. ಜಾತ್ರೆಯಲ್ಲಿ ಕೃಷಿ ಮೇಳ, ವಸ್ತುಪ್ರದರ್ಶನ, ಕುಸ್ತಿ ಪಂದ್ಯಾವಳಿ, ದೇಸಿ ಆಟಗಳು ಹಾಗೂ ಅನೇಕ ರೈತಪರ ಕಾರ್ಯಕ್ರಮಗಳನ್ನು ಶ್ರೀಮಠವು ನಡೆಸಿಕೊಂಡು ಬರುತ್ತಿದೆ. ಇಂತಹ ಮಠಗಳು ಇರುವುದರಿಂದ ರಾಜ್ಯದಲ್ಲಿ ಸುಖ–ಶಾಂತಿ ನೆಲೆಗೊಂಡಿದೆ ಎಂದು ಹೇಳಿದರು. – ತೇಜ

## ಸಾವಯವ ಸಿರಿಧಾನ್ಯ ಆರೋಗ್ಯಕ್ಕೆ ಮಾನ್ಯ

ಅಳವಡಿಸಿಕೊಂಡು ಬೆಳೆಯುವ ಕೃಷಿಗಳು ಕೂಡ ವೈಜ್ಞಾನಿಕ ಕೃಷಿಗಳೆ, ಆದರೆ ಆಧುನಿಕ ಕೃಷಿ ಪದ್ಧತಿಯನ್ನು ನಾವು ಬಳಸಿಕೊಳ್ಳದಿರಲು ಸಾಧ್ಯವಿಲ್ಲ, ಸ್ವಾತಂತ್ರ್ಯ ನಂತರ ಭಾರತದಲ್ಲಿ ಆಹಾರ ಉತ್ಪಾದನೆಯು ಶೇ 50 ಮಿಲಿಯನ್ ಟನ್ ರಷ್ಟು ಇತ್ತು. ಆದರೆ ಆಧುನಿಕ ಪದ್ಧತಿಯನ್ನು ಅಳವಡಿಸಿಕೊಂಡ ನಂತರ 300 ಮಿಲಿಯನ್‌ಗೆ ಹೆಚ್ಚಳವಾಗಿದೆ. ಹಾಗೂ ಭಾರತೀಯರಾದ ನಾವು ಆಹಾರ ಉತ್ಪಾದನೆಯಲ್ಲಿ ಸ್ವಾಲಂಬಿಗಳಾಗಿದ್ದೇವೆ. ನಮಗಷ್ಟೆ ಅಲ್ಲದೆ ಇತರೆ ದೇಶಗಳಿಗೂ ಅನಿವಾರ್ಯವಿದ್ದಾಗ ಆಹಾರವನ್ನು ಕೊಡುಗೆಯಾಗಿ ನೀಡುವಷ್ಟು ಯಥೇಚ್ಛವಾಗಿ ಬೆಳೆಗಳನ್ನು ಬೆಳೆಯುತ್ತಿದ್ದೇವೆ.

ಮನುಷ್ಯನು ದುರಾಸೆಗೊಳಗಾಗಿ ಆಧುನಿಕತೆಯನ್ನು ಅವಶ್ಯಕತೆಗಿಂತ ಹೆಚ್ಚು ಬಳಸಿಕೊಳ್ಳುತ್ತಿದ್ದು ಉತ್ಪಾದನೆಯು ಕಡಿಮೆಯಾಗುತ್ತಿದೆ. ಹೀಗಾಗಿ ನಾವು ಹಿಂದಿನ ಸಾವಯವ ಕೃಷಿ ಪದ್ದತಿಯನ್ನು ಜಾರಿಗೆ ತರಬೇಕಾದ ಅನಿವಾರ್ಯತೆ ಕಡ್ಡಾಯವಾಗಿದೆ ಎಂದು ತಿಳಿಸಿದ ಅವರು ಶ್ರೀಮಠವು ನಡೆಸುತ್ತಿರುವ ಸರ್ವಕಾರ್ಯಗಳಿಗೂ ನಾವೆಲ್ಲರು ಕೈಜೋಡಿಸಬೇಕು ಎಂದು ಹೇಳಿದರು. –ಅನುಷ.ಪಿ, ಬಸವರಾಜು

# ‘ಮೂರ್ಛೆ ಮಾರಕ ರೋಗವಲ್ಲ’




ಮೂರ್ಛೆರೋಗ ಸಾಮಾನ್ಯವಾಗಿ ಕಂಡುಬರುವ ಒಂದು ನರರೋಗ. ಜಗತ್ತಿನಾದ್ಯಂತ ಸುಮಾರು ಐದು ಕೋಟಿ ಜನರನ್ನು ಮೂರ್ಛೆರೋಗ ಬಾಧಿಸುತ್ತಿದೆ ಎಂದು ಅಂಕಿ–ಅಂಶದಿಂದ ತಿಳಿದು ಬಂದಿದೆ. ಭಾರತ ದೇಶದಲ್ಲಿ ಸುಮಾರು 80 ಲಕ್ಷ ಜನರು ಈ ರೋಗ ಹೊಂದಿರುವರೆಂದು ಅಂದಾಜು ಮಾಡಲಾಗಿದೆ. ಮೂರ್ಛೆ ರೋಗ ಒಂದು ಮಾನಸಿಕ ಖಾಯಿಲೆಯಲ್ಲ, ಇದೊಂದು ಮೆದುಳಿಗೆ ಸಂಬಂಧಪಟ್ಟ ಖಾಯಿಲೆ. ಇದು ಸಂಪೂರ್ಣವಾಗಿ ಗುಣಪಡಿಸಬಹುದಾದಂಥ ಒಂದು ಖಾಯಿಲೆಯಾಗಿದ್ದು, ಇದಕ್ಕೆ ಪ್ರಾರಂಭದಲ್ಲಿಯೇ ಚಿಕಿತ್ಸೆ ನೀಡಿದರೆ ಹೆಚ್ಚಿನ ಫಲಿತಾಂಶ ನಿರೀಕ್ಷಿಸಬಹುದು.

ಚಿಕಿತ್ಸಾ ಅವಧಿ 2 ರಿಂದ 5 ವರ್ಷದವರೆಗೆ, ಇದು ಸಾಂಕ್ರಾಮಿಕ ರೋಗವಲ್ಲ, ವಂಶ ಪಾರಂಪರ್ಯವೂ ಅಲ್ಲ. ಆದರೆ ಇತ್ತೀಚೆಗೆ ಲಭ್ಯವಿರುವ ಔಷಧಿಗಳಿಂದ ನೂರಕ್ಕೆ 75 ರಿಂದ 80 ರಷ್ಟು ಮೂರ್ಛೆ ರೋಗವನ್ನು ಹತೋಟಿಗೆ ತರಬಹುದು. ಗರ್ಭಿಣಿ ಮಹಿಳೆಯರು ಈ ರೋಗವಿದ್ದಲ್ಲಿ ಹೆಚ್ಚಿನ ಪೋಷಕಾಂಶ ಇರುವ ಔಷಧಿಯನ್ನು ಸೇವಿಸಬೇಕು. ಮೂರ್ಛೆ ರೋಗವಿರುವ ಸಣ್ಣ ಮಕ್ಕಳು, ಯುವಕರು ನಿದ್ದೆಗೆಡಬಾರದು. ರೋಗ ಕಂಡುಬಂದ ತಕ್ಷಣದಲ್ಲಿ ರೋಗಿಯ ಕೈಗೆ ಕಬ್ಬಿಣದ ವಸ್ತುಗಳನ್ನು ಕೊಡಬಾರದು, ಎರಡು ನಿಮಿಷಗಳಲ್ಲಿ ಖಾಯಿಲೆ ತಹಬಂದಿಗೆ ಬರುತ್ತದೆ. ಮೂರ್ಛೆ ರೋಗದಿಂದ ಮನುಷ್ಯನ ಮೆದುಳು ಹಾನಿಗೊಳ್ಳುವುದಿಲ್ಲ ಮತ್ತು ಅವನ ಬುದ್ಧಿಶಕ್ತಿ, ಜ್ಞಾಪಕಶಕ್ತಿ ಕುಂಠಿತವಾಗುವುದಿಲ್ಲ ಎಂದು ಕಿರುನಾಟಕದ ಮೂಲಕ ನಿಮ್ಹಾನ್ಸ್ ಆಸ್ಪತ್ರೆಯ ಎಸ್. ವೆಂಕಟೇಶ್ ಮತ್ತು ತಂಡದವರು ತಿಳಿಸಿಕೊಟ್ಟರು. – ಬಸವರಾಜು ನಾಯ್ಕ್

# ಕಾಹಳ್ಳಿಯಲ್ಲಿ ಮೊಳಗಿದ ಧರ್ಮ ಕಹಳೆ



ಷಟ್‌ಸ್ಥಲ ಧ್ವಜಾರೋಹಣದಲ್ಲಿ ವಾಟಾಳು ಶ್ರೀಗಳು, ಶ್ರೀ ವರರುದ್ರಮುನಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ಶಿವಲಿಂಗ ಸ್ವಾಮಿಗಳು ಮೊದಲಾದವರಿದ್ದಾರೆ.

ಕಾಹಳ್ಳಿ ಗ್ರಾಮದಲ್ಲಿ ಶುಕ್ರವಾರ ಮುಂಜಾನೆ ಸ್ನೇಹ–ಸೌಹಾರ್ದ– ಶಾಂತಿ ಪ್ರಾರ್ಥನಾ ಪಥಸಂಚಲನವನ್ನು ಶ್ರದ್ಧಾಭಕ್ತಿಯಿಂದ ನೆರವೇರಿಸಲಾಯಿತು. ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರರ ಉತ್ಸವ ಮೂರ್ತಿಗೆ ಭಕ್ತಾದಿಗಳು ಪೂಜೆಸಲ್ಲಿಸಿ ವಾದ್ಯಮೇಳ, ಬ್ಯಾಂಡ್‌ಸೆಟ್, ಭಜನೆ ಮತ್ತು ಶಾಲಾ ವಿದ್ಯಾರ್ಥಿಗಳ ಪಥಸಂಚಲನದೊಂದಿಗೆ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿದರು.

ರಾಯಚೂರು ಜಿಲ್ಲೆಯ ಮಸ್ಕಿ ಗ್ರಾಮದ ಶ್ರೀ ಗಚ್ಚಿನಮಠದ ಷ.ಬ್ರ.ಶ್ರೀ ವರರುದ್ರಮುನಿ ಶಿವಾಚಾರ್ಯ ಸ್ವಾಮಿಗಳವರು ಷಟ್‌ಸ್ಥಲ ಧ್ವಜಾರೋಹಣವನ್ನು ನೆರವೇರಿಸಿ ಶುಭಸಂದೇಶ ನೀಡುತ್ತಾ, ಸುತ್ತೂರು ಶ್ರೀಮಠವು ಈ ನಾಡಿನಲ್ಲಿ ವಿಶೇಷ ಪರಂಪರೆಯನ್ನು ಹೊಂದಿದೆ. ಹಲವು ವರ್ಷಗಳಿಂದ ಜಾತ್ರಾ ಮಹೋತ್ಸವದ ಸಮಯದಲ್ಲಿ ಸುತ್ತೂರಿನ ಸುತ್ತ–ಮುತ್ತಲಿನ ಹಳ್ಳಿಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ನಡೆಸುವುದರಿಂದ ಸಮಾಜದಲ್ಲಿ ಸ್ನೇಹ, ಪ್ರೀತಿ, ಸೌಹಾರ್ದ ಮತ್ತು ಶಾಂತಿಯನ್ನು ಹೆಚ್ಚಿಸಲು ಶ್ರಮಿಸುತ್ತಿದೆ ಎಂದು ಹೇಳಿದರು.

ಟಿ.ನರಸೀಪುರ ತಾಲೂಕಿನ ಮೇದಿನಿ ಗ್ರಾಮದ ಶ್ರೀ ಪಟ್ಟದಮಠದ ಷ.ಬ್ರ ಶ್ರೀ ಶಿವಲಿಂಗ ಸ್ವಾಮಿಗಳವರು ಧರ್ಮಸಂದೇಶ ನೀಡುತ್ತಾ, ಶಿವಾನುಭವ ಶ್ರೇಷ್ಠತೆಯ ಬಗ್ಗೆ ಮಾತನಾಡಿದ ಅವರು ಮಾನವ ದೈವಾಂಶ ಜೀವಾತ್ಮನಲ್ಲಿ ಸೇರಿಕೊಂಡು ಆ ಜೀವಾತ್ಮ ಪರಮಾತ್ಮನಾಗುವುದಕ್ಕೆ ಇಂತಹ ಧರ್ಮ ಸಂದೇಶಗಳು ಬಹಳ ಮುಖ್ಯ. ಜೀವಾತ್ಮ ಪರಮಾತ್ಮನಾಗಲು ಮನುಷ್ಯರು ಭಕ್ತಿ, ಮಹೇಶ, ಪ್ರಸಾದಿ, ಪ್ರಾಣಲಿಂಗ, ಶರಣ, ಐಕ್ಯ, ಸ್ಥಳಗಳನ್ನು ಏರಬೇಕು. ಪ್ರತಿಯೊಬ್ಬ ಮನುಷ್ಯನು ಜ್ಞಾನ, ಕರುಣೆ, ಸ್ನೇಹ ಮತ್ತು ಸೌಹಾರ್ದತೆಯನ್ನು ಬೆಳಸಿಕೊಂಡು ಎಲ್ಲರೊಡನೆ ಒಂದಾಗಿ ಬದುಕಲು ಇಂತಹ ಕಾರ್ಯಕ್ರಮಗಳ ಅಗತ್ಯವಿದೆ ಎಂದು ನುಡಿದರು.

ವಾಟಾಳು ಶ್ರೀ ಸೂರ್ಯಸಿಂಹಾಸನ ಮಠಾಧೀಶರಾದ ಷ.ಬ್ರ. ಡಾ. ಶ್ರೀ ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಶುಭಸಂದೇಶದಲ್ಲಿ ಪರಮಪೂಜ್ಯ ಶ್ರೀ ರಾಜೇಂದ್ರ ಶ್ರೀಗಳವರು ಪ್ರಾರಂಭಿಸಿದ ಅನ್ನದಾಸೋಹವನ್ನು ಇಂದಿನ ಜಗದ್ಗುರುಗಳು ಶ್ರೀ ಶಿವರಾತ್ರೀಶ್ವರರ ಕೃಪೆಯಿಂದಾಗಿ ಮೇಲುಕೀಳು ಎಂಬ ಭಾವನೆಯಿಲ್ಲದೆ ಲಕ್ಷಾಂತರ ಮಂದಿಗೆ ಅನ್ನ ಮತ್ತು ಅಕ್ಷರ ದಾಸೋಹವನ್ನು ನೀಡುತ್ತಾ ಸಮಾಜದಲ್ಲಿ ಶಾಂತಿ ಸೌಹಾರ್ದತೆಯನ್ನು ಕಾಪಾಡಿಕೊಂಡು ಬರುತ್ತಿರುವುದು ನಮ್ಮೆಲ್ಲರ ಪುಣ್ಯವೇ ಸರಿ ಎಂದು ಹೇಳಿದರು. – **ಶುಭಶ್ರೀ, ಚಂದನ**

## ಗಾಳಿಪಟ ಸ್ಪರ್ಧೆಯು ಅತ್ಯಂತ ಆಕರ್ಷಣೀಯ



ಜಾತ್ರಾ ಮಹೋತ್ಸವದ ಗಾಳಿಪಟ ಸ್ಪರ್ಧೆಯನ್ನು ಉದ್ಘಾಟಿಸಿ ಮಾತನಾಡಿದ ಶಾಸಕರು, ಮಾಜಿಸಚಿವರಾದ **ಶ್ರೀ ಎಚ್.ಕೆ. ಪಾಟೀಲ್‌ರವರು** ಇಲ್ಲಿ ಆಯೋಜನೆಗೊಂಡಿರುವ ಗಾಳಿಪಟ ಸ್ಪರ್ಧೆಯು ಬಹಳ ವಿಶಿಷ್ಟವೂ, ಆಕರ್ಷಣಿಯೂ ಆಗಿದ್ದು, ಜನರು ಹೆಚ್ಚಿನ ಆಸಕ್ತಿಯಿಂದ ಭಾಗವಹಿಸುತ್ತಿದ್ದಾರೆ. ಶ್ರೀ ಸುತ್ತೂರು ಜಾತ್ರೆಯು ಬೇರೆ ಜಾತ್ರೆಯಂತಲ್ಲ. ಯಾವುದೇ ಒಂದು ಕಾರ್ಯಕ್ರಮಕ್ಕೆ ಸೀಮಿತವಾಗದೆ, ಎಲ್ಲ ರೀತಿಯ ಕಾರ್ಯಕ್ರಮಗಳನ್ನು ನಡೆಸಿ ಜನರಿಗೆ ಒಳ್ಳೆಯ ಮಾಹಿತಿ ಮತ್ತು ಜ್ಞಾನವನ್ನು ರವಾನಿಸುತ್ತಿದ್ದು ಜಾತ್ರೆಯ ಕಲ್ಪನೆಯನ್ನೇ ಬದಲಾಯಿಸಿದೆ. ಇಲ್ಲಿ ಅನೇಕ ವಿಜ್ಞಾನಿಗಳು, ಸಾಧಕರು, ಸಂಶೋಧಕರ ಉಪನ್ಯಾಸಗಳನ್ನು ಏರ್ಪಡಿಸಿ ಜನರಿಗೆ ಅಗತ್ಯ ಮಾಹಿತಿಗಳನ್ನು ನೀಡಲಾಗುತ್ತಿದೆ.

ರೈತರಿಗೆ ಮಾಹಿತಿಗಳನ್ನು ನೀಡಲು ಕೃಷಿ ಮೇಳವನ್ನು ಆಯೋಜಿಸಿ ಆಧುನಿಕ ಬೇಸಾಯ ಪದ್ಧತಿ, ತುಂತುರು ನೀರಾವರಿ ಪದ್ಧತಿ ಹಾಗೂ ಆಧುನಿಕ ಕೃಷಿ ಯಂತ್ರೋಪಕರಣಗಳನ್ನು ಪರಿಚಯಿಸುವ ವಸ್ತುಪ್ರದರ್ಶನವನ್ನು ಏರ್ಪಡಿಸಿರುವುದು ಅನುಕರಣೀಯವಾಗಿದೆ. ಸಾವಯವ ಕೃಷಿ ವಿಧಾನವನ್ನು ರೈತರು ಅಳವಡಿಸಿಕೊಳ್ಳುವುದರಿಂದ ಮಿತವ್ಯಯ ಹಾಗೂ ಹೆಚ್ಚು ಲಾಭಗಳಿಸಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಎಲ್ಲಾ ಪಕ್ಷದ ರಾಜಕೀಯ ನಾಯಕರನ್ನೂ ಒಂದೇ ವೇದಿಕೆಯಲ್ಲಿ ತಂದು ಸಮನ್ವಯತೆಯನ್ನು ಉಂಟುಮಾಡಿ ಸಾತ್ವಿಕ ಸಮಾಜವನ್ನು ಕಟ್ಟುವ ಶ್ರೀಗಳ ಆಶಯ ಅತ್ಯಂತ ಶ್ಲಾಘನೀಯವಾದದ್ದು, ಪೂಜ್ಯ ಶ್ರೀಗಳವರು ಜಾತ್ರೆಯ ಮುಖಾಂತರ ರೈತರಿಗೆ ವೈಚಾರಿಕ ಚಿಂತನೆಗಳನ್ನು ಬಿತ್ತುತ್ತಿದ್ದಾರೆ. ಶ್ರೀಮಠದಿಂದ ಇಂತಹ ಇನ್ನಷ್ಟು ಉತ್ತಮ ಕೆಲಸಗಳಾಗಲಿ ಎಂದು ಆಶಿಸಿದರು. – **ಚೈತ್ರ.ಎಂ**



## ಜಾತ್ರಾ ಮಹೋತ್ಸವ

### ಶ್ರೀ ಕ್ಷೇತ್ರದಲ್ಲಿಂದು

**ಚಿತ್ರಕಲಾ ಸ್ಪರ್ಧೆ : ಉದ್ಘಾಟನೆ** — ಬೆಳಗ್ಗೆ 10.30
**ಭಜನಾ ಮೇಳ : ಸಮಾರೋಪ**

**ಸಮ್ಮುಖ** : ಶ್ರೀ ಸದ್ಗುರು ಬೋಧಿನಾಥ ವೇಲಾಯನ ಸ್ವಾಮಿಗಳು, ಹಿಂದೂ ಮೊನ್ಯಾಸ್ಟರಿ, ಹವಾಯಿ, ಅಮೆರಿಕ, ಷ.ಬ್ರ.ಡಾ. ಶ್ರೀ ವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳು, ಶ್ರೀ ಗಣಾಚಾರ್ಯ ಸಂಸ್ಥಾನ ಮಠ, ಮುಖೇಡ್, ಮಹಾರಾಷ್ಟ್ರ. **ಅಧ್ಯಕ್ಷತೆ** : ಶ್ರೀ ಸುರೇಶ್ ಸಿ. ಅಂಗಡಿ, ಕೇಂದ್ರ ರೈಲ್ವೆ ರಾಜ್ಯ ಸಚಿವರು. **ಉದ್ಘಾಟನೆ** : ಶ್ರೀ ಬಸವರಾಜ ಎಸ್. ಬೊಮ್ಮಾಯಿ, ಗೃಹ ಮತ್ತು ಸಹಕಾರ ಸಚಿವರು. **ಸಮಾರೋಪ ಭಾಷಣ** : ಶ್ರೀ ಸಿ.ಟಿ. ರವಿ, ಪ್ರವಾಸೋದ್ಯಮ, ಕನ್ನಡ ಸಂಸ್ಕೃತಿ ಮತ್ತು ಸಕ್ಕರೆ ಸಚಿವರು. **ಬಹುಮಾನ ವಿತರಣೆ** : ಪುರುಷರ ತಂಡ : ಡಾ.ಜಿ. ಪರಮೇಶ್ವರ, ಶಾಸಕರು, ಮಾಜಿ ಉಪ ಮುಖ್ಯಮಂತ್ರಿಗಳು, ಮಹಿಳೆಯರ ತಂಡ : ಶ್ರೀ ಎಸ್.ಟಿ. ಸೋಮಶೇಖರ್, ವಿಧಾನಸಭಾ ಸದಸ್ಯರು, ಯಶವಂತಪುರ, ಏಕತಾರಿ ತಂಡ : ಕು. ಶೋಭಾ ಕರಂದ್ಲಾಜೆ, ಸಂಸದರು, ಮಾಜಿ ಸಚಿವರು, ಮಕ್ಕಳ ತಂಡ : ಶ್ರೀ ಈಶ್ವರ್ ಬಿ. ಖಂಡ್ರೆ, ಶಾಸಕರು, ಮಾಜಿ ಸಚಿವರು, ಕಾರ್ಯಾಧ್ಯಕ್ಷರು, ಕೆಪಿಸಿಸಿ. **ಮುಖ್ಯ ಅತಿಥಿಗಳು** : ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ್, ಶಾಸಕರು, ಮಾಜಿ ಸಚಿವರು, ಶ್ರೀ ಎಂ. ಕೃಷ್ಣಪ್ಪ, ಶಾಸಕರು, ಮಾಜಿ ಸಚಿವರು, ಶ್ರೀ ಅನಿಲ್‌ಕುಮಾರ್ ಚಿಕ್ಕಮಾದು, ವಿಧಾನಸಭಾ ಸದಸ್ಯರು, ಹೆಚ್.ಡಿ. ಕೋಟೆ, ಶ್ರೀಮತಿ ನಿರ್ಮಲ ಸಿ. ಎಲಿಗಾರ, ಕಾರ್ಯಕ್ರಮ ಮುಖ್ಯಸ್ಥರು, ಆಕಾಶವಾಣಿ, ಬೆಂಗಳೂರು, ಪ್ರೊ. ಸಿ. ನಾಗಣ್ಣ, ನಿವೃತ್ತ ಪ್ರಾಧ್ಯಾಪಕರು, ಬೆಂಗಳೂರು.

**ಸುತ್ತೂರು ಶ್ರೀಮಠದ ಪ್ರಸಾದ ನಿಲಯಗಳ** — ಬೆಳಗ್ಗೆ : 11.00
**ಹಿರಿಯ ವಿದ್ಯಾರ್ಥಿಗಳ ಸಮಾವೇಶ**

**ಅಧ್ಯಕ್ಷತೆ** : ಶ್ರೀ ಎಲ್. ರೇವಣ್ಣಸಿದ್ಧಯ್ಯ, ನಿವೃತ್ತ ಪೊಲೀಸ್ ಮಹಾನಿರ್ದೇಶಕರು. **ಸ್ಥಳ** : ಶ್ರೀ ಅಲ್ಲಮಪ್ರಭು ಸಭಾಂಗಣ, ಸುತ್ತೂರು ಶಾಲಾ ಆವರಣ

**ಕುಸ್ತಿ ಪಂದ್ಯಾವಳಿ** — ಮಧ್ಯಾಹ್ನ 2.00

**ಸಮ್ಮುಖ** : ಷ.ಬ್ರ. ಡಾ. ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಸೂರ್ಯಸಿಂಹಾಸನ ಮಠ, ವಾಟಾಳು, ನಿ.ಪ್ರ.ಸ್ವ. ಶ್ರೀ ಚಂದ್ರಶೇಖರ ಸ್ವಾಮಿಗಳು, ಶ್ರೀ ಗವಿಮಠ, ಬೆಟ್ಟದಹಳ್ಳಿ, ತುಮಕೂರು ಜಿಲ್ಲೆ. **ಅಧ್ಯಕ್ಷತೆ** : ಶ್ರೀ ಬಿ. ಶ್ರೀರಾಮುಲು, ಆರೋಗ್ಯ, ಕುಟುಂಬ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು. **ಉದ್ಘಾಟನೆ** : ಶ್ರೀ ಕೆ.ಎಸ್. ಈಶ್ವರಪ್ಪ, ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು. **"ಸುತ್ತೂರು ಕುಮಾರ" ಪ್ರಶಸ್ತಿ ವಿತರಣೆ** : ಶ್ರೀ ಹೆಚ್.ಡಿ. ರೇವಣ್ಣ, ಶಾಸಕರು, ಮಾಜಿ ಸಚಿವರು. **"ಸುತ್ತೂರು ಕೇಸರಿ" ಪ್ರಶಸ್ತಿ ವಿತರಣೆ** : ಶ್ರೀ ಪ್ರತಾಪ ಸಿಂಹ, ಲೋಕಸಭಾ ಸದಸ್ಯರು. **ಮುಖ್ಯ ಅತಿಥಿಗಳು** : ಶ್ರೀ ಅಡಗೂರು ಹೆಚ್. ವಿಶ್ವನಾಥ್, ಮಾಜಿ ಸಚಿವರು, ಶ್ರೀ ಎಂ. ಶ್ರೀನಿವಾಸ್, ವಿಧಾನಸಭಾ ಸದಸ್ಯರು, ಮಂಡ್ಯ, ಶ್ರೀ ಎಟ್ಟಿಮಡ್ಡೈ ಎ. ಷಣ್ಮುಗಂ, ವಿಧಾನಸಭಾ ಸದಸ್ಯರು, ಕಿನತುಕಡವು, ಕೊಯಮತ್ತೂರು ಜಿಲ್ಲೆ, ಶ್ರೀ ಸಿ.ಎಸ್. ನಿರಂಜನ್‌ಕುಮಾರ್, ವಿಧಾನಸಭಾ ಸದಸ್ಯರು, ಗುಂಡ್ಲುಪೇಟೆ, ಶ್ರೀ ಎಲ್. ನಾಗೇಂದ್ರ, ವಿಧಾನಸಭಾ ಸದಸ್ಯರು, ಮೈಸೂರು, ಶ್ರೀ ಎಂ. ಅಶ್ವಿನ್‌ಕುಮಾರ್, ವಿಧಾನಸಭಾ ಸದಸ್ಯರು, ಟಿ.ನರಸೀಪುರ, ಶ್ರೀ ರವೀಂದ್ರ ಶ್ರೀಕಂಠಯ್ಯ, ವಿಧಾನಸಭಾ ಸದಸ್ಯರು, ಶ್ರೀರಂಗಪಟ್ಟಣ, ಶ್ರೀ ಸಿ.ಬಿ. ರಿಷ್ಯಂತ್, ಆರಕ್ಷಕ ಅಧೀಕ್ಷಕರು, ಮೈಸೂರು ಜಿಲ್ಲೆ

**ಸಾಂಸ್ಕೃತಿಕ ಮೇಳ ಹಾಗೂ** — ಸಂಜೆ 5.00
**ದನಗಳ ಜಾತ್ರೆ : ಸಮಾರೋಪ**

**ಸಮ್ಮುಖ** : ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮಿಗಳು, ಜಗದ್ಗುರು ವೀರಶೈವ–ಲಿಂಗಾಯತ ಪಂಚಮಸಾಲಿ ಪೀಠ, ಸುಕ್ಷೇತ್ರ ಹರಿಹರ, ಡಾ. ಶ್ರೀ ಪ್ರಕಾಶನಾಥ ಸ್ವಾಮಿಗಳು, ಅಧ್ಯಕ್ಷರು, ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್, ಬೆಂಗಳೂರು. **ಅಧ್ಯಕ್ಷತೆ** : ಶ್ರೀ ಡಿ.ಕೆ. ಶಿವಕುಮಾರ್, ಶಾಸಕರು, ಮಾಜಿ ಸಚಿವರು. **ಸಮಾರೋಪ ಭಾಷಣ**: ಶ್ರೀ ಹೆಚ್.ಡಿ. ಕುಮಾರಸ್ವಾಮಿ, ಶಾಸಕರು, ಮಾಜಿ ಮುಖ್ಯಮಂತ್ರಿಗಳು. **ಪಾರಿತೋಷಕ ವಿತರಣೆ** : ಶ್ರೀ ಸಿ.ಎಸ್. ಪುಟ್ಟರಾಜು, ಶಾಸಕರು, ಮಾಜಿ ಸಚಿವರು. **ಸಾಂಸ್ಕೃತಿಕ ಮೇಳ : ಬಹುಮಾನ ವಿತರಣೆ** : ಶ್ರೀ ಅರವಿಂದ ಲಿಂಬಾವಳಿ, ಶಾಸಕರು, ಮಾಜಿ ಸಚಿವರು. **ಫಲಕ ವಿತರಣೆ** : ಶ್ರೀ ಸಾ.ರಾ. ಮಹೇಶ್, ಶಾಸಕರು, ಮಾಜಿ ಸಚಿವರು. **ಮುಖ್ಯ ಅತಿಥಿಗಳು** : ಶ್ರೀ ಮರಿತಿಬ್ಬೇಗೌಡ, ಶಾಸಕರು, ಮಾಜಿ ಉಪಸಭಾಪತಿಗಳು, ಶ್ರೀ ಹೆಚ್.ಕೆ. ಕುಮಾರಸ್ವಾಮಿ, ಶಾಸಕರು, ರಾಜ್ಯಾಧ್ಯಕ್ಷರು, ಜಾತ್ಯಾತೀತ ಜನತಾದಳ, ಶ್ರೀ ಕೆ.ವೈ. ನಂಜೇಗೌಡ, ವಿಧಾನಸಭಾ ಸದಸ್ಯರು, ಮಾಲೂರು, ಶ್ರೀ ಕೆ.ಸಿ. ಕೊಂಡಯ್ಯ, ವಿಧಾನಪರಿಷತ್ ಸದಸ್ಯರು, ಬಳ್ಳಾರಿ, ಶ್ರೀ ಆರ್. ಗಣೇಶ್, ವಿಧಾನಸಭಾ ಸದಸ್ಯರು, ಊಟಿ, ಶ್ರೀ ಬಿ.ಜಿ. ಜ್ಯೋತಿಪ್ರಕಾಶ್ ಮಿರ್ಜಿ, ನಿವೃತ್ತ ಎಡಿಜಿಪಿ, ಅಧ್ಯಕ್ಷರು, ವಿಶ್ವ ವೀರಶೈವ–ಲಿಂಗಾಯತ ಒಕ್ಕೂಟ. **ಅಭಿನಂದನೆ** : ಶ್ರೀಮತಿ ಸಾಲು ಮರದ ತಿಮ್ಮಕ್ಕ, ವೃಕ್ಷಸಂರಕ್ಷಕರು, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು

## ಜಾತ್ರಾ ಮಹೋತ್ಸವ

### ಪೂಜೆ – ಉತ್ಸವ

**25 ಜನವರಿ 2020 ಶನಿವಾರ**

| | |
|---|---|
| **ಪ್ರಾತಃಕಾಲ 4.00** | : ಕರ್ತೃಗದ್ದುಗೆ : ಮಹಾರುದ್ರಾಭಿಷೇಕ |
| **ಪ್ರಾತಃಕಾಲ 5.00** | : ಮಂತ್ರಮಹರ್ಷಿಗಳು ಹಾಗೂ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಗದ್ದುಗೆಗಳಿಗೆ ಮಹಾರುದ್ರಾಭಿಷೇಕ |
| **ಬೆಳಗ್ಗೆ 6.30** | : **ತಾಯೂರು** : ಸ್ನೇಹ–ಸೌಹಾರ್ದ–ಶಾಂತಿ ಪ್ರಾರ್ಥನಾ ಪಥಸಂಚಲನ |
| **ಬೆಳಗ್ಗೆ 7.30** | : ಷಟ್‌ಸ್ಥಲ ಧ್ವಜಾರೋಹಣ : ಷ.ಬ್ರ.ಶ್ರೀ ಶಂಕರಸ್ವಾಮಿಗಳು ಶ್ರೀ ಬಸವೇಶ್ವರ ಮಠ, ಮೈಸೂರು |
| **ಧರ್ಮಸಂದೇಶ** | : ಷ.ಬ್ರ.ಶ್ರೀ ಮುಮ್ಮಡಿ ಶಾಂತಮಲ್ಲಿಕಾರ್ಜುನ ಸ್ವಾಮಿಗಳು, ಶ್ರೀ ಪಟ್ಟದಮಠ, ಕಾಮಗೆರೆ |
| **ಬೆಳಗ್ಗೆ 8.00** | : ರಾಜಗುರುತಿಲಕ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 34ನೆಯ ಸಂಸ್ಮರಣೋತ್ಸವ |
| **ಬೆಳಗ್ಗೆ 11.00** | : ಗ್ರಾಮದೇವತೆ ದೊಡ್ಡಮ್ಮತಾಯಿ ಉತ್ಸವ |
| **ರಾತ್ರಿ 9.00** | : ತೆಪ್ಪೋತ್ಸವ : ಬಾಣಬಿರುಸುಗಳ ಪ್ರದರ್ಶನ |

# ರೈತರ ಅಭಿವೃದ್ಧಿಯೇ ಸರ್ಕಾರದ ಗುರಿ



ಕೃಷಿ ವಿಚಾರಸಂಕಿರಣ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅಬಕಾರಿ, ಕೌಶಲಾಭಿವೃದ್ಧಿ, ಜೀವನೋಪಾಯ ಮತ್ತು ಉದ್ಯಮಶೀಲತೆ ಸಚಿವರಾದ ಶ್ರೀ **ಹೆಚ್.ನಾಗೇಶ್‌ರವರು** ಭಾರತ ಕೃಷಿ ಪ್ರಧಾನ ದೇಶವಾಗಿದೆ. ದೇಶದ ಬೆನ್ನೆಲುಬಾಗಿರುವ ರೈತರಿಗೋಸ್ಕರ ರಾಜ್ಯ ಸರ್ಕಾರವು ಅನೇಕ ರೈತಪರ ಯೋಜನೆಗಳನ್ನು ಹಮ್ಮಿಕೊಂಡಿದ್ದು ರೈತಪರ ಸರ್ಕಾರವಾಗಿದೆ. ಅದೇ ರೀತಿಯಾಗಿ ಸರ್ಕಾರದ ಗಮನ ಸೆಳೆಯುವಂತಹ ಕೆಲಸಗಳನ್ನು ಶ್ರೀಮಠವು ಮಾಡುತ್ತಾ ಬಂದಿದೆ. ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ ಅಡಿಯಲ್ಲಿ ಪ್ರತಿ ಅರ್ಹ ರೈತ ಕುಟುಂಬಕ್ಕೆ 6000 ರೂ.ಗಳು ಪ್ರೋತ್ಸಾಹ ಧನವನ್ನು ಕೇಂದ್ರ ಸರ್ಕಾರ ನೀಡುತ್ತಿದ್ದು ರಾಜ್ಯ ಸರ್ಕಾರವು 4000 ರೂ.ಗಳನ್ನು ಎರಡು ಕಂತಿನಲ್ಲಿ ನೀಡಿ ರೈತರ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಇದಕ್ಕಾಗಿ ಸರ್ಕಾರವು 2.200 ಕೋಟಿ ರೂ.ಗಳನ್ನು ಮೀಸಲಿಟ್ಟಿದೆ. ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಯಡಿಯಲ್ಲಿ 2018–2019ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಒಟ್ಟು 1451 ಕೋಟಿ ರೂಗಳನ್ನು 2.48 ಲಕ್ಷ ರೈತರಿಗೆ ನೀಡಲಾಗಿದೆ. ರೈತರಿಗೆ ಅನುಕೂಲವಾಗುವಂತೆ ಪ್ರಸ್ತುತ ಸಾಲಿನಲ್ಲಿ ಉತ್ತಮ ಗುಣಮಟ್ಟ ಮತ್ತು ಸುಧಾರಿಸಿದ ಬಿತ್ತನೆ ಬೀಜಗಳನ್ನು ರೈತರಿಗೆ ನೀಡಲಾಗುತ್ತಿದೆ.

ಸಾವಯವ ಕೃಷಿಗೆ ಹೆಚ್ಚು ಒತ್ತು ನೀಡುವ ಸಲುವಾಗಿ "ಸಾವಯವ ಭಾಗ್ಯ" ಯೋಜನೆಯಡಿ 79,797 ರೈತರುಗಳ 1.07,575 ಹೆಕ್ಟೇರ್ ಪ್ರದೇಶವನ್ನು ಸಾವಯವ ಕೃಷಿ ಭೂಮಿಯಾಗಿ ಪರಿವರ್ತನೆ ಮಾಡಲಾಗುತ್ತಿದೆ. ಮುಂದಿನ 10 ವರ್ಷಗಳ ಒಳಗೆ 1,50,000 ಹೆಕ್ಟೇರ್ ಪ್ರದೇಶಕ್ಕೆ ಹೆಚ್ಚಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಸಿರಿಧಾನ್ಯ ಉತ್ಪಾದನೆಗಾಗಿ ರೈತಸಿರಿ ಕಾರ್ಯಕ್ರಮವನ್ನು ಸ್ಥಾಪಿಸಲಾಗಿದೆ. 50 ಲಕ್ಷ ಹೆಕ್ಟೇರ್ ಗಳಿಗೆ ಸಿರಿಧಾನ್ಯಗಳನ್ನು ಬೆಳೆಯಲು 50 ಕೋಟಿ ರೂ.ಗಳ ಅನುದಾನವನ್ನು ನೀಡಲಾಗಿದೆ. ಮಳೆಯಾಶ್ರಿತ ರೈತರ ಜೀವನವನ್ನು ಉತ್ತಮಪಡಿಸಲು ರಾಜ್ಯದಲ್ಲಿ "ಕೃಷಿಭಾಗ್ಯ" ಯೋಜನೆಯನ್ನು ಜಾರಿಗೆ ತರಲಾಗಿದೆ. ಬಿದ್ದ ಮಳೆನೀರನ್ನು ಸಂಗ್ರಹಿಸಿ ರೈತರ ಬೆಳೆಗೆ ಅನುಕೂಲವಾಗುವಂತೆ ಮಾಡಲಾಗಿದೆ. ಇದರಿಂದ ಇಳುವರಿಯು ಕೂಡ ಹೆಚ್ಚಳವಾಗಿದೆ ಎಂದು ತಿಳಿಸಿದರು. – **ಆದರ್ಶ್**

# ಆರೋಗ್ಯ ಮತ್ತು ಶೈಕ್ಷಣಿಕ ಅರಿವು




ವಸ್ತುಪ್ರದರ್ಶನದ ಆವರಣದಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ವತಿಯಿಂದ ಆರೋಗ್ಯ ಮತ್ತು ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಹಲವು ಯೋಜನೆಗಳ ಮತ್ತು ಸವಲತ್ತುಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಸಲುವಾಗಿ ಮಳಿಗೆಗಳನ್ನು ತೆರೆಯಲಾಗಿದೆ.

ಆರೋಗ್ಯಕ್ಕೆ ಸಂಬಂಧಿಸಿದಂತೆ "ಆರೋಗ್ಯ ಕಾರ್ಯಕ್ರಮಗಳ ವಸ್ತುಪ್ರದರ್ಶನ"ದಲ್ಲಿ ಕಾಲರ, ಮೆದುಳುಜ್ವರ, ಡೆಂಗ್ಯೂ, ಚಿಕುನ್‌ಗುನ್ಯ, ಕ್ಷಯ, ಕುಷ್ಠರೋಗ ಇಂತಹ ಕಾಯಿಲೆಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವುದರ ಜೊತೆಗೆ ಅವುಗಳ ಬಗ್ಗೆ ಮಾಹಿತಿಯನ್ನು ತಿಳಿಸಲಾಗುತ್ತಿದೆ. ಜನರ ಆರೋಗ್ಯವನ್ನು ಕಾಪಾಡಲು ಸರ್ಕಾರ ಕೈಗೊಂಡಿರುವ ವಾತ್ಸಲ್ಯವಾಣಿ, ಆಯುಷ್ಮಾನ್ ಭಾರತ್ ಎಂಬ ಉಚಿತ ಸೇವೆಗಳ ಬಗ್ಗೆ ಹೆಚ್ಚಿನ ಒತ್ತನ್ನು ನೀಡಿ ಜನರಿಗೆ ಮಾಹಿತಿಗಳನ್ನು ನೀಡುತ್ತಿದ್ದೇವೆ ಎಂದು ಹೊಸಕೋಟೆಯ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಶ್ರೀ ಕೃಷ್ಣಮೂರ್ತಿರವರು ತಿಳಿಸಿದರು.

ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ "ಶೈಕ್ಷಣಿಕ ವಸ್ತುಪ್ರದರ್ಶನ" ಎಂಬ ಮಳಿಗೆಯಲ್ಲಿ ಮಕ್ಕಳ ಕಲಿಕೆಗೆ ಅನುಕೂಲವಾಗುವಂತೆ ಕಲಿಕೋಪಕರಣಗಳು ಮತ್ತು ಕಲಿಸುವ ವಿಧಾನಗಳ ಬಗ್ಗೆ ಮಾಹಿತಿಯನ್ನು ಮತ್ತು ವಿಶೇಷವಾಗಿ ನಂಜನಗೂಡಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ. ಎನ್. ರಾಜುರವರು ಜಾರಿಗೆ ತಂದಿರುವ ಕನ್ನಡ




ಪ್ರಯೋಗಾಲಯದ ಸಂಪೂರ್ಣ ಮಾಹಿತಿಯನ್ನು ಇಲ್ಲಿ ಪ್ರದರ್ಶಿಸಿದ್ದೇವೆ ಎಂದು ಮಾದಾಪುರ ಸ.ಹಿ.ಪ್ರಾ.ಶಾಲೆ ಪ್ರಭಾರ ಮುಖ್ಯಶಿಕ್ಷಕರಾಗಿರುವ ಸಿದ್ದೇಶ್‌ರವರು ಮಾಹಿತಿ ನೀಡಿದರು. – **ಶುಭಶ್ರೀ**

## ಕೃಷಿ ವಿಚಾರಸಂಕಿರಣ

# ಕೃಷಿಕರ ಹೊಂಗಿರಣ



ಕೃಷಿ ವಿಚಾರ ಸಂಕಿರಣದಲ್ಲಿ ಮುಖ್ಯ ಅತಿಥಿಗಳಾಗಿದ್ದ ಶಿವಮೊಗ್ಗದ ವಿಧಾನ ಪರಿಷತ್ ಸದಸ್ಯರಾದ ಶ್ರೀ **ಎಸ್. ರುದ್ರೇಗೌಡರು** ಸಾವಯವ ಕೃಷಿ ಸಾಧಕರನ್ನು ವೇದಿಕೆಗೆ ಕರೆತಂದು ಅವರ ವಿಚಾರಧಾರೆಯನ್ನು ರೈತರಿಗೆ ತಿಳಿಯುವಂತೆ ಮಾಡಿರುವುದು ಪ್ರೇರಣೆ ನೀಡಿದಂತಾಗಿದೆ.

ರೈತರು ಹವಾಮಾನಕ್ಕೆ ತಕ್ಕಂತೆ ಸಾವಯವ ಕೃಷಿ ಪದ್ಧತಿಯನ್ನು ಅನುಸರಿಸಿ ಪರ್ಯಾಯ ಬೆಳೆಗಳನ್ನು ಬೆಳೆದರೆ ಯಶಸ್ಸನ್ನು ಕಾಣಬಹುದು. ಈ ನಿಟ್ಟಿನಲ್ಲಿ ಲಭ್ಯವಿರುವ ಕೃಷಿ ಪರಿಕರಗಳು ಹಾಗೂ ಆಧುನಿಕ ತಂತ್ರಜ್ಞಾನವನ್ನು ಕೃಷಿ ಸಂಶೋಧಕರ ಮೂಲಕ ರೈತರಿಗೆ ಪರಿಚಯಿಸುವ ವೇದಿಕೆ ಇದಾಗಿದ್ದು ಪ್ರತಿಯೊಬ್ಬ ರೈತನೂ ಸಹ ಇಂತಹ ವಿಚಾರ ಸಂಕಿರಣಗಳ ಸದುಪಯೋಗ ಪಡೆದುಕೊಂಡು ವೈಜ್ಞಾನಿಕ ಕೃಷಿ ಪದ್ಧತಿಯನ್ನು ರೂಢಿಸಿಕೊಳ್ಳಬೇಕೆಂದು ಕರೆ ನೀಡುವುದರೊಂದಿಗೆ ಶ್ರೀಮಠ ನಡೆಸುವಂತಹ ಕಾರ್ಯಕ್ರಮಗಳನ್ನು ಮೆಚ್ಚಿ ಕೃತಜ್ಞತೆ ಸಲ್ಲಿಸಿದರು. –**ಕುಮಾರ್.ಎನ್**



ಜಾತ್ರಾ ಮಹೋತ್ಸವದ ಕಾರ್ಯದರ್ಶಿಗಳಾದ ಶ್ರೀ ಎಸ್. ಶಿವಕುಮಾರಸ್ವಾಮಿಯವರು, ಶ್ರೀ ಎಸ್.ಪಿ. ಉದಯಶಂಕರ್
ಶ್ರೀ ಜಯರಾಜೇಂದ್ರ ಸ್ವಾಮಿಗಳವರೊಂದಿಗೆ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಯಕ ನಿರತ ವಾಹನ ಚಾಲಕರು.



## ಸುಮಧುರ ಗಾನ - ಬಹುಮಾನ ಪ್ರದಾನ

### ನಗರ ಮಹಿಳಾ ವಿಭಾಗ

ದಾವಣಗೆರೆಯ ಶ್ರೀ ಶಾಂತವೀರಸ್ವಾಮಿ ಭಜನಾ ತಂಡ ಪ್ರಥಮ ಬಹುಮಾನವನ್ನು ಬಹಳ ಸುಮಧುರವಾಗಿ ಹಾಡುತ್ತಾ ಪಡೆದರೆ, ಮೈಸೂರಿನ ಶ್ರೀ ಬಸವೇಶ್ವರ ಸೇವಾ ಸಮಿತಿಯವರು ಪೇಕ್ಷಕರು ಭಜನೆಯನ್ನು ಗುನುಗುವಂತೆ ಮಾಡಿ ಎರಡನೇ ಬಹುಮಾನವನ್ನು ಪಡೆದರು. ಮೈಸೂರಿನ ರಾಮಾನುಜ ರಸ್ತೆಯ ವೈಷ್ಣವಿ ಮಹಿಳಾ ಮಂಡಳಿಯುವರು ಸುಮಧುರವಾಗಿ ಹಾಡುವ ಮೂಲಕ ಮೂರನೇ ಬಹುಮಾನವನ್ನು ಎತ್ತಿ ಹಿಡಿದರೆ, ಅರ್ಥಪೂರ್ಣವಾದ ಭಜನೆಗಳನ್ನು ಹಾಡುವ ಮೂಲಕ ಸಭಿಕರ ಮೆಚ್ಚುಗೆಗೆ ಪಾತ್ರವಾದ ಮೈಸೂರಿನ ರಾಮಕೃಷ್ಣ ನಗರದ ಸ್ವರಾಂಜಲಿ ಸಂಗೀತ ಕೇಂದ್ರದವರು ನಾಲ್ಕನೇ ಬಹುಮಾನವಕ್ಕೆ ಭಾಜನರಾದರು. ಮೈಸೂರಿನ ಮಂಡಿ ಮೊಹಲ್ಲಾದ ಹಂಸಧ್ವನಿ ಕಲಾನಿಕೇತನ ತಂಡದವರು ಉತ್ತಮ ಕಾರ್ಯಕ್ರಮ ನಡೆಸಿಕೊಡುವ ಮೂಲಕ ಐದನೇ ಬಹುಮಾನವನ್ನು ಪಡೆದುಕೊಂಡಿತು.

## ದೊಡ್ಡಹುಂಡಿಯ ಚಿಕ್ಕಮಕ್ಕಳಿಗೆ ಪ್ರಥಮ ಬಹುಮಾನ

### ಮಕ್ಕಳ ವಿಭಾಗ

ಮಕ್ಕಳ ಭಜನಾ ಮಂಡಳಿ ಸ್ಪರ್ಧೆಯಲ್ಲಿ ಗುಂಡ್ಲುಪೇಟೆ ತಾಲ್ಲೂಕಿನ ದೊಡ್ಡಹುಂಡಿಯ ಮಕ್ಕಳ ಮಹದೇಶ್ವರ ಭಜನಾ ತಂಡದವರು ಮಂತ್ರಮುಗ್ಧ ಭಜನೆಯನ್ನು ಮಾಡುವ ಮೂಲಕ ಪ್ರಥಮ ಬಹುಮಾನವನ್ನು ಪಡೆದರೆ, ಹೆಚ್.ಡಿ. ಕೋಟೆ ತಾಲ್ಲೂಕಿನ ಮುಳ್ಳೂರು ಗ್ರಾಮದ ಶ್ರೀ ಬಸವೇಶ್ವರ ಭಜನಾ ತಂಡ ಉತ್ತಮವಾಗಿ ಭಜನೆಯನ್ನು ಹಾಡುವ ಮೂಲಕ ಎರಡನೇ ಬಹುಮಾನ ಪಡೆಯಿತು. ಬೆಳಗಾಂ ಜಿಲ್ಲೆ, ಬೈಲಹೊಂಗಲ ತಾಲ್ಲೂಕು, ಮಲ್ಲಮ್ಮನ ಬೆಳವಾಡಿಯ ಮಕ್ಕಳ ಭಜನಾ ಮಂಡಳಿ ಮೂರನೇ ಬಹುಮಾನ ಹಾಗೂ ಮೈಸೂರಿನ ಕುವೆಂಪುನಗರದ ತೃಪ್ತಿ ಮತ್ತು ವೃಂದ ನಾಲ್ಕನೇ ಬಹುಮಾನವನ್ನು ತಮ್ಮದೇ ಶೈಲಿಯಲ್ಲಿ ಹಾಡಿ ಗಳಿಸಿಕೊಂಡರೆ, ಮೈಸೂರಿನ ಬೋಗಾದಿಯ ನಂದಿನಿ ರಂಗನಾಥ್‌ರವರ ತಂಡ ಐದನೇ ಬಹುಮಾನವನ್ನು ಪಡೆದು ಭಜನೆ ಮುಂದುವರಿಸಿತು.

## ಮಾಲೆಯಾಳಿ ಮಹಿಳೆಯರ ಗಾನ ಭಜಾನ!

### ಕೇರಳ ಮಹಿಳಾ ವಿಭಾಗ

ಕೇರಳ ಮಹಿಳಾ ವಿಭಾಗದ ಭಜನೆ ಸ್ಪರ್ಧೆಯಲ್ಲಿ ಕಾಸರಗೂಡಿನ ಕೋರುವೇಲುವಿನ ಶ್ರೀ ದುರ್ಗಾ ಪರಮೇಶ್ವರಿ ಪುರುಷರ ಭಜನಾ ತಂಡ ಕೇರಳದ ಜಾನಪದ ಶೈಲಿಯಲ್ಲಿ ಹಾಡಿ ಪ್ರಥಮ ಬಹುವಾನವನ್ನು ಗಿಟ್ಟಿಸಿಕೊಂಡರೆ, ಕಾಸರಗೂಡಿನ ಕೋರುವೇಲುವಿನ ರಾಜ ರಾಜೇಶ್ವರಿ ಮಹಿಳಾ ಭಜನಾ ತಂಡದವರು ವಿಶೇಷ ಭಜನಾ ಗೀತೆಗಳನ್ನು ಹಾಡುವ ಮೂಲಕ ಎರಡನೇ ಬಹುಮಾನವನ್ನು ಮುಡಿಗೇರಿಸಿಕೊಂಡರು. ಮೂರನೇ ಬಹುಮಾನವನ್ನು ಕಾಸರಗೂಡು ಅರಿಕಟ್ಟಿ ಕುಂಬ್ಳೆಯ ಹನುಮ ಭಕ್ತ ಮಹಿಳಾ ಭಜನಾ ತಂಡ ವಿಶೇಷ ಗಾಯನದ ಮೂಲಕ ಪಡೆಯಿತು.

**ರಾಜ್ಯ ಮಟ್ಟದ ಭಜನಾ ಮೇಳದಲ್ಲಿ ಈ ಬಾರಿ 700ಕ್ಕೂ ಹೆಚ್ಚು ತಂಡಗಳು ಭಾಗವಹಿಸಿದ್ದು ವಿಶೇಷವಾಗಿತ್ತು**

## ನವೀಕರಿಸಬಹುದಾದ

### ಇಂಧನ ಬಳಸಿ... ಪರಿಸರ ಉಳಿಸಿ...




ವಸ್ತುಪ್ರದರ್ಶನದ ಆವರಣದಲ್ಲಿ ಕರ್ನಾಟಕದಾದ್ಯಂತ ನವೀಕರಿಸಬಹುದಾದ ಇಂಧನ ಮೂಲಗಳ ಉತ್ತೇಜನಕ್ಕೆಂದು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯ ವತಿಯಿಂದ ವಿವಿಧ ರೀತಿಯ ಉಪಕರಣಗಳನ್ನು ಹೊಂದಿರುವ ಸಂಚಾರಿ ವಾಹನ ಒಂದನ್ನು ಪ್ರದರ್ಶನಕ್ಕಿರಿಸಲಾಗಿದೆ.

ನವೀಕರಿಸಬಹುದಾದ ಇಂಧನ ಮೂಲಗಳಾದ ಸೌರಶಕ್ತಿ, ಪವನ ಶಕ್ತಿ, ಕಿರುಜಲ ಶಕ್ತಿ, ಜೈವಿಕ ಶಕ್ತಿ ಹಾಗೂ ಇನ್ನಿತರ ಮೂಲಗಳನ್ನು ಬಳಸಿ ಪರಿಸರಕ್ಕೆ ಹಾನಿ ಯಾಗದಂತೆ ಹಸಿರು ವಿದ್ಯುಚ್ಛಕ್ತಿಯನ್ನು ಉತ್ಪಾದಿಸಬಲ್ಲ ಯೋಜನೆಗಳನ್ನು ಪ್ರೋತ್ಸಾಹಿಸುವುದು ಹಾಗೂ ಇಂಧನ ಉಳಿತಾಯಕ್ಕೆ ಹೆಚ್ಚು ಒತ್ತು ನೀಡುವುದು ಸಂಸ್ಥೆಯ ಪ್ರಮುಖ ಉದ್ದೇಶವಾಗಿದೆ. ಸಾರ್ವಜನಿಕರಿಗೆ ನವೀಕರಿಸ ಬಹುದಾದ ಇಂಧನ ಉಪಕರಣಗಳು ಹಾಗೂ ಕಡಿಮೆ ವಿದ್ಯುತ್ ಪ್ರಯೋಗಿಸಬಲ್ಲ ಉಪಕರಣಗಳ ಮಾಹಿತಿ ನೀಡುವುದು ಕೂಡ ಸಂಸ್ಥೆಯ ಮುಖ್ಯ ಚಟುವಟಿಕೆಯಾಗಿರುತ್ತದೆ.

ಕಳೆದ ಮೂರು ವರ್ಷಗಳಿಂದ ಜಾತ್ರಾ ಮಹೋತ್ಸವದಲ್ಲಿ ಪ್ರಾಜೆಕ್ಟ್ ಎಂಜಿನಿಯರ್‌ರಾದ ಶ್ರೀ ದಿನೇಶ್ ಕುಮಾರ್‌ರವರ ನೇತೃತ್ವದಲ್ಲಿ ಈ ವಾಹನ ಪ್ರದರ್ಶನಕ್ಕಿರಸಲಾಗಿದ್ದು, ಇದರಲ್ಲಿ ಸೌರಶಕ್ತಿ ದೀಪ, ಸೌರಶಕ್ತಿ ಮನೆದೀಪ, ಸೌರಶಕ್ತಿ ಬೀದಿ ದೀಪ, ಸೌರಶಕ್ತಿ ಕುಕ್ಕರ್, ಪೆಟ್ಟಿಗೆ ಮಾದರಿ, ಕೇಂದ್ರೀಕೃತ ಮಾದರಿ, ಸೌರಶಕ್ತಿ ನೀರು ಕಾಯಿಸುವ ಉಪಕರಣ, ಸೌರಶಕ್ತಿ ನೀರೆತ್ತುವ ಉಪಕರಣಗಳನ್ನು ನೋಡಿ ಹೆಚ್ಚಿನ ಮಾಹಿತಿ ಪಡೆದುಕೊಳ್ಳಬಹುದಾಗಿದೆ.

– ಶುಭಶ್ರೀ, ಚಂದನ



## ಇತಿಹಾಸ ಮರುಕಳಿಸುವುದೆಂದರೆ ಹೀಗೆಯೆ...

**ಅಂದು,** ಗಂಗ ಮತ್ತು ಚೋಳ ರಾಜರ ನಡುವೆ ನಡೆಯಬಹುದಾಗಿದ್ದ ಕದನವನ್ನು ತಮ್ಮ ದಿವ್ಯ ಶಾಂತಿ ಮಂತ್ರದಿಂದ ನಿಲ್ಲಿಸಿ ಇಬ್ಬರು ಅರಸರಲ್ಲಿ ಸ್ನೇಹ– ಬಾಂಧವ್ಯದ ಬೆಸುಗೆಯನ್ನು ಬೆಸೆದವರು ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರು.

**ಇಂದು,** ಎರಡು ವಿಭಿನ್ನ ರಾಷ್ಟ್ರೀಯ ಪಕ್ಷಗಳ ನೇತಾರರನ್ನು (ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಿ.ಎಲ್. ಸಂತೋಷ್ ಅವರಿಂದ ಶಾಸಕರು, ಹಾಗೂ ಕೆಪಿಸಿಸಿ ಅಧ್ಯಕ್ಷರಾದ ಶ್ರೀ ದಿನೇಶ್ ಗುಂಡೂರಾವ್ ಅವರಿಗೆ ಮಾಲಾರ್ಪಣೆ) ಪರಸ್ಪರ ಸ್ನೇಹ ವಿನಿಮಯ ಮಾಡಿಕೊಳ್ಳುವ ಅಪೂರ್ವ ಅವಕಾಶವನ್ನು ಕಲ್ಪಿಸುವ ಮೂಲಕ ಜಾತ್ರಾ ಮಹೋತ್ಸವದಲ್ಲಿ ಸಂತಸದ ಕ್ಷಣಗಳಿಗೆ ಕಾರಣ–ಪ್ರೇರಣರಾದವರು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು.



# ದೇಸಿ ಆಟಗಳ ಮಹತ್ವ

ಭಾರತದಲ್ಲಿ ಹಲವಾರು ದೇಸಿಯ ಆಟಗಳು ಕಂಡು ಬರುತ್ತವೆ. ಅದರಲ್ಲೂ ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ದೇಸಿ ಪದ್ಧತಿಯ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮೊದಲ ಆದ್ಯತೆಯನ್ನು ನೀಡಲಾಗಿದೆ. ದೇಸಿಯ ಆಟಗಳು ಅದರಿಂದಾಗುವ ಲಾಭಗಳು ಮತ್ತು ಮಕ್ಕಳಲ್ಲಿ ಇದರ ಬಗ್ಗೆ ಆಸಕ್ತಿಯನ್ನುಂಟು ಮಾಡಲು ಪ್ರಯತ್ನಿಸಲಾಗುತ್ತಿದೆ.

ಆಧುನಿಕ ಆಟಗಳೇ ವಿಜೃಂಭಿಸುತ್ತಿರುವ ಈ ಯುಗದಲ್ಲಿ ದೇಸಿ ಆಟಗಳಿಗೆ ಪ್ರಾಮುಖ್ಯತೆಯೇ ಇಲ್ಲದಂತಾಗಿದೆ. ದೇಸಿ ಆಟಗಳಿಗೆ ಪ್ರಾಮುಖ್ಯತೆ ನೀಡುವ ಒಂದು ಪ್ರಯತ್ನವನ್ನು ಮಾಡಲಾಗುತ್ತಿದೆ. ದೇಸಿ ಆಟಗಳು ಅಸ್ತಿತ್ವವನ್ನೇ ಕಳೆದುಕೊಳ್ಳುವ ಪರಿಸ್ಥಿತಿ ಇಂದು ಒದಗಿದೆ. ಸುತ್ತೂರಿನ ಜಾತ್ರಾ ಮಹೋತ್ಸವದಲ್ಲಿ ನಡೆಯುತ್ತಿರುವ ಈ ದೇಸಿ ಆಟಗಳ ಸ್ಪರ್ಧೆಯಲ್ಲಿ 19 ಪ್ರಾಥಮಿಕ ಶಾಲೆ ಹಾಗೂ 62 ಪ್ರೌಢಶಾಲೆಗಳಿಂದ 800 ಬಾಲಕರು 600 ಬಾಲಕಿಯರು ಸೇರಿ ಒಟ್ಟು 1452 ಮಕ್ಕಳು ಭಾಗವಹಿಸುತ್ತಿದ್ದಾರೆ. ಇಲ್ಲಿ ಸುಮಾರು 18 ಬಗೆಯ ಆಟಗಳನ್ನು ಆಡಿಸಲಾಗುತ್ತಿದೆ. ನವಕಂಕರಿ, ಹುಲಿ-ಕುರಿ, ಚೌಕಬಾರ, ಚದುರಂಗ, ಕುಂಟಾಬಿಲ್ಲೆ, ಗೋಲಿ, ಬುಗುರಿ, ಹಾವು-ಏಣಿ, ಕೆಸರುಗದ್ದೆ ಓಟ, ಹಗ್ಗ-ಜಗ್ಗಾಟ, ಅಣ್ಣೆಕಲ್ಲು, ಅಳುಗುಳಿಮನೆ ಹೀಗೆ ವಿವಿಧ ರೀತಿಯ ದೇಸಿ ಆಟಗಳನ್ನು ಆಡಿಸಲಾಗುತ್ತಿದೆ.

ಬೆಂಗಳೂರು, ಮೈಸೂರು, ಚಾಮರಾಜನಗರ, ಮಂಡ್ಯ, ಊಟಿಯ ಜೆಎಸ್‌ಎಸ್ ಶಾಲೆಗಳಿಂದ ಮಕ್ಕಳು ಭಾಗವಹಿಸಿದ್ದಾರೆ. ದೇಸಿ ಆಟಗಳನ್ನು ಆಡಿಸುವ ಮೂಲಕ ಅವುಗಳ ಪರಂಪರೆಯನ್ನು ಉಳಿಸಿ ಬೆಳೆಸುವ ಪ್ರಯತ್ನ ಮಾಡಲಾಗುತ್ತಿದೆ.

**– ಅನನ್ಯ.ಜಿಎಸ್**







## ಕಡಿಮೆ ಖರ್ಚು-ಹೆಚ್ಚು ಇಳುವರಿ

ಕೃಷಿ ವಿಚಾರಸಂಕಿರಣ ಸಮಾರೋಪದಲ್ಲಿ ಐಸಿಎಆರ್-ಎಟಿಎಆರ್ಐ ನಿರ್ದೇಶಕರಾದ **ಡಾ. ಎಂ.ಜಿ. ಚಂದ್ರೇಗೌಡರವರು,** ರೈತರ ಸಮಸ್ಯೆಗೆ ಪರಿಹಾರ ನೀಡಲು ಪರಿಪೂರ್ಣ ಪ್ರಯತ್ನವನ್ನು ಇಂದು ಮಾಡಿದ್ದಾರೆ. ಕೃಷಿ ಬ್ರಹ್ಮಾಂಡವನ್ನೇ ತಿಳಿಯುವಂತೆ ಶ್ರೀಕ್ಷೇತ್ರದಲ್ಲಿ ಒಂದು ಎಕರೆ ಜಮೀನಿನಲ್ಲಿ 170 ಬೆಳೆಗಳನ್ನು ಒಟ್ಟಿಗೆ ಬೆಳೆದು ರೈತರಿಗೆ ಸ್ಫೂರ್ತಿಯನ್ನು ತುಂಬಿದ್ದಾರೆ. ಅಲ್ಲದೆ ಸಮಗ್ರ ಕೃಷಿ ಪದ್ಧತಿಯನ್ನು ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದವರು ಸೃಷ್ಟಿಸಿದ್ದಾರೆ. ವಿಜ್ಞಾನವನ್ನು ಕೃಷಿಯಲ್ಲಿ ಹೇಗೆ ಬಳಸಿ ಕೊಳ್ಳಬೇಕು ಎಂಬುದನ್ನು ಇಲ್ಲಿ ತಿಳಿದುಕೊಳ್ಳಬಹುದು. ಮಣ್ಣು, ನೀರು ಮತ್ತು ವಾತಾವರಣ ಕಲುಷಿತವಾಗದಂತೆ ವೈಜ್ಞಾನಿಕ ರೀತಿಯಲ್ಲಿ ವ್ಯವಸಾಯವನ್ನು ಮಾಡುವಂತೆ ರೈತರಿಗೆ ತಿಳಿ ಹೇಳಿದರು. ಕಡಿಮೆ ಖರ್ಚಿನಲ್ಲಿ ಹೆಚ್ಚು ಇಳುವರಿಯನ್ನು ಪಡೆಯುವ ವಿಧಾನವನ್ನು ಶ್ರೀಮಠ ಜಾತ್ರೆಯ ಮೂಲಕ ತಿಳಿಸುವ ಪ್ರಯತ್ನ ಮಾಡುತ್ತಿದೆ ಎಂದರು.**– ಹರ್ಷಿತ ಎಂ.**

## ಸದಾ ಒಂದಾಗಿರಲಿ ಅಂತರಂಗ-ಬಹಿರಂಗ



ಮನುಷ್ಯ ಒಳ್ಳೆಯ ಚಿಂತನೆಗಳನ್ನು ಮಾಡುವುದರಿಂದ ಅಂತರಂಗ ಶುದ್ಧಿಯಾಗುತ್ತದೆ ಎಂದು ಕೆ.ಆರ್. ನಗರದ ಶ್ರೀ ಕನಕಗುರು ಶಾಖಾ ಮಠದ **ಡಾ. ಶ್ರೀ ಶಿವಾನಂದ ಪುರಿ ಸ್ವಾಮಿಗಳವರು,** ಅಂತರಂಗದ ಕೃಷಿ ಮಾಡಲು ಮನುಷ್ಯ ಮನಸ್ಸು ಮಾಡಬೇಕು. ಪಂಚೇಂದ್ರಿಯಗಳನ್ನು ನಿಯಂತ್ರಣದಲ್ಲಿಟ್ಟುಕೊಂಡು ಆಧ್ಯಾತ್ಮ ಸಾಧನೆ ಮಾಡಿದಾಗ ಮಾತ್ರ ಮನುಷ್ಯ ಆತ್ಮಸಂಸ್ಕಾರ ಪಡೆಯಲು ಸಾಧ್ಯ. ಮನುಷ್ಯ ತಾನು ಲೌಕಿಕ ಜಗತ್ತಿನಲ್ಲಿ ಸತ್ಕಾರ್ಯಗಳನ್ನು ಮಾಡಿದಾಗ ಬಹಿರಂಗವಾಗಿಯೂ ಶುದ್ಧಿಯಾಗುತ್ತಾನೆ. ಅಂತರಂಗ-ಬಹಿರಂಗಗಳೆರಡರ ಸಮನ್ವಯವು ಮನುಷ್ಯನನ್ನು ಪರಿಪೂರ್ಣ ವ್ಯಕ್ತಿಯನ್ನಾಗಿ ರೂಪಿಸುತ್ತದೆಂದು ಹೇಳಿದರು. **– ವಿನುವಿರಾಟ್ ಸಿ**

## ರೈತರಿಗೆ ಸಿಗಲಿ ಬೆಂಬಲ



ಸ್ವಾತಂತ್ರ್ಯ ಬಂದ ನಂತರ ಸರ್ಕಾರವು ಸಾಮಾಜಿಕ ಜವಾಬ್ದಾರಿಯನ್ನು ಹೊತ್ತು, ಜನರಿಗೆ ಉದ್ಯೋಗ ಆಹಾರ, ವಸತಿ ಸೌಲಭ್ಯಗಳನ್ನು ನೀಡುವುದಕ್ಕಿಂತ ಮೊದಲು ಮಠಮಾನ್ಯಗಳು ಸರ್ವರಿಗೂ ಅನ್ನ, ವಸತಿ ವಿದ್ಯೆಯನ್ನು ಒದಗಿಸಿವೆ. ಸುತ್ತೂರು ಶ್ರೀಮಠವು ಸ್ವಾತಂತ್ರ್ಯ ನಂತರದಲ್ಲಿಯೂ ಸರ್ಕಾರಗಳು ನಾಚುವಂತೆ ಹೆಚ್ಚಿನ ರೀತಿಯಲ್ಲಿ ಜ್ಞಾನಾನ್ನದಾಸೋಹಗಳನ್ನು ಮುಂದುವರೆಸುತ್ತಿದೆ ಎಂದು ಲೋಕಸಭಾ ಸದಸ್ಯರಾದ **ಶ್ರೀ ಪ್ರತಾಪ ಸಿಂಹರವರು** ತಿಳಿಸಿದರು.

ಸಾವಯವ ಕೃಷಿ ಮತ್ತು ಜಲವೈಜ್ಞಾನಿಕ ಬಳಕೆ ವಿಚಾರಸಂಕಿರಣ ಹಾಗೂ ಗಾಳಿಪಟ ಸ್ಪರ್ಧೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಾವಯವ ಕೃಷಿಯಲ್ಲಿ ತೊಡಗಿಸಿಕೊಂಡಿರುವ ರೈತರನ್ನು ಜಾತ್ರೆಗೆ ಕರೆಸಿ ಸನ್ಮಾನ ಮಾಡುವುದು ಶ್ರೀಮಠಕ್ಕೆ ರೈತರ ಬಗ್ಗೆ ಇರುವ ಹೆಚ್ಚಿನ ಕಾಳಜಿಯನ್ನು ತೋರುತ್ತದೆ ಎಂದು ಹೇಳಿದರು.

ಸುತ್ತೂರು ಶ್ರೀಗಳು ಸರ್ವರನ್ನು ಸಮನಾಗಿ ಕಾಣುವುದು ಹಾಗೂ ಸರ್ವಪಕ್ಷಗಳನ್ನು ಒಂದೇ ಎಂದು ಭಾವಿಸುವುದು ಶ್ಲಾಘನೀಯವಾದದ್ದು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬೆಳೆಗಳಿಗೆ ಬೆಂಬಲ ಬೆಲೆಯನ್ನು ನೀಡಿ ಅವರಿಗೆ ಪ್ರೋತ್ಸಾಹ ನೀಡಬೇಕು ಎಂದು ಹೇಳಿದರು. **–ಅನುಷ.ಪಿ**


## ಆತ್ಮವಿಶ್ವಾಸವುಳ್ಳವನೇ ನಿಜವಾದ ರೈತ



ಕೃಷಿ ವಿಚಾರಸಂಕಿರಣ ಸಮಾರೋಪ ಸಮಾರಂಭದ ಸಮ್ಮುಖವಹಿಸಿದ್ದ, ಕಲಬುರ್ಗಿ ಜಿಲ್ಲೆಯ ಶ್ರೀ ಶಿವಲಿಂಗೇಶ್ವರ ವಿರಕ್ತ ಮಠದ **ನಿ.ಪ್ರ.ಸ್ವ. ಶ್ರೀ ಅಭಿನವ ಶಿವಲಿಂಗ ಸ್ವಾಮಿಗಳು** ಕಾರ್ಯಕ್ರಮಕ್ಕೆ ಶುಭಕೋರುತ್ತಾ ಮಾತನಾಡಿ ನಾನು ಸಹ ಸುತ್ತೂರು ಶ್ರೀಕ್ಷೇತ್ರದ ವಿದ್ಯಾರ್ಥಿ ಆಗಿದ್ದೆ ಆದ್ದರಿಂದ ಶ್ರೀಮಠದ ಬಗ್ಗೆ ನನಗೆ ಹೆಮ್ಮೆ ಇದೆ. ನನ್ನ ಪ್ರಕಾರ ಎಲ್ಲಾ ವಿದ್ಯೆಗಿಂತ ಕೃಷಿ ವಿದ್ಯೆಯೇ ಮೇಲು, ಈಗಿನ ಕಾಲದ ಜನರು ಹಣಕ್ಕೆ ಮೌಲ್ಯಕೊಡುತ್ತಾರೆ ಆದರೆ ಎಂದಿಗೂ ಹಣವನ್ನು ಊಟದ ರೀತಿ ತಿನ್ನಲಾಗುವುದಿಲ್ಲ.

ಕೃಷಿ ನಮ್ಮ ದೇಶದ ಬೆನ್ನೆಲುಬು ಕೃಷಿಯನ್ನು ನಾವು ಎಂದಿಗೂ ಕೀಳಾಗಿ ಕಾಣಬಾರದು. ಕೃಷಿಯಾಧರಿಸಿ ಈಗ ಹೆಚ್ಚಿನ ಕಾರ್ಖಾನೆ ಆರಂಭವಾಗಿದೆ ಕೃಷಿಯಲ್ಲಿ ಜನರು ಹೆಚ್ಚಾಗಿ ಕೀಟನಾಶಕಗಳನ್ನು ಬಳಸುತ್ತಿದ್ದಾರೆ ಅದರ ಬದಲು ಸಾವಯವ ಕೃಷಿಗೆ ಮುಖಮಾಡಿ ನಿಲ್ಲಬೇಕು. ಅದರಿಂದ ನಮಗೆ ಲಾಭದ ಬಾಗಿಲುತೆರೆಯುತ್ತದೆ ಈಗಿನ ಕಾಲಘಟ್ಟದಲ್ಲಿ ರೈತ ಬಡವನಾಗುವುದಕ್ಕೆ ಮುಖ್ಯ ಕಾರಣವೆಂದರೆ ಅವನು ಕೇವಲ ಒಂದೇ ಬೆಳೆಗೆ ಅವಲಂಬಿತನಾಗಿರುತ್ತಾನೆ. ಅದರ ಬದಲು ಮಿಶ್ರ ಬೆಳೆಗಳನ್ನು ಬೆಳೆದರೆ ಅವನಿಗೆ ಕಷ್ಟ ಎಂಬುದು ಸುಳಿಯುದಿಲ್ಲ. ಅವನ ಸ್ಥಿತಿ ಸುಧಾರಿಸುತ್ತದೆ. ಕಷ್ಟಗಳಿಂದ ಸೋತು ಆತ್ಮಹತ್ಯೆ ಮಾಡಿಕೊಳ್ಳುವವನು ರೈತನಾಗುವುದಿಲ್ಲ. ಆತ್ಮವಿಶ್ವಾಸ ಹೊಂದಿದವನೆ ನಿಜವಾದ ರೈತ ಆದ್ದರಿಂದ ರೈತ ಎಂದರೆ ಅಸಡ್ಡೆ ಎಂದಿಗೂ ಬೇಡ ಅವನು ಬೆಳೆಯುವ ಬೆಳೆಯಿಂದಲೇ ನಾವೆಲ್ಲರೂ ಬದುಕುತ್ತಿರುವುದು ಎಂಬುದು ಮರೆಯಬಾರದು ಎಂದು ರೈತಾಪಿ ವರ್ಗಕ್ಕೆ ಪ್ರೇರಣೆಯನ್ನು ನೀಡಿದರು. **– ರಕ್ಷಿತ .ವಿ**

## ಸಾಂಸ್ಕೃತಿಕ ಕಾರ್ಯಕ್ರಮಗಳು



### 25 ಜನವರಿ 2020 ಶನಿವಾರ

ಗದ್ದುಗೆ ಆವರಣದಲ್ಲಿ ಬೆಳಗ್ಗೆ 8.00 ಗಂಟೆಗೆ ನಾದಸ್ವರ, 9.00ಕ್ಕೆ ಜನಪದ ತಂಡಗಳಿಂಡ ವಿವಿಧ ಕಲಾಪ್ರದರ್ಶನ, ಮಧ್ಯಾಹ್ನ 2.00ಕ್ಕೆ ಮೈಸೂರಿನ ವಿವೇಕಾನಂದನಗರದ ರಂಗಗೀತಾಂಜಲಿ ತಂಡದವರಿಂದ ರಂಗಗೀತೆಗಳು, 3.00ಕ್ಕೆ ಹಾಸನದ ಶ್ರೀ ರಮೇಶ್ ದೊಡ್ಡಹಳ್ಳಿರವರಿಂದ ಜನಪದ ಗಾಯನ, ಸಂಜೆ 6.30ಕ್ಕೆ ಮೈಸೂರಿನ ಶ್ರೀರಾಂಪುರದ ಅಪೂರ್ವ ಗಾನಲಹರಿ ತಂಡದವರಿಂದ ಸುಗಮ ಸಂಗೀತ, ರಾತ್ರಿ 7.30ಕ್ಕೆ ನಂಜನಗೂಡಿನ ನೂಪುರ ನೃತ್ಯಾಂಜಲಿ ನಾಟ್ಯಶಾಲೆಯ ಶಿವಮೃದಂಗಂರವರಿಂದ ಭರತನಾಟ್ಯ ಹಾಗೂ ಮೈಸೂರಿನ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಕಾನೂನು ಸೇವೆಗಳ ಧ್ಯೇಯೋದ್ದೇಶಗಳ ಬಗ್ಗೆ ಜನಸಾಮಾನ್ಯರಿಗೆ ಅರಿವು ನಾಟಕ ಪ್ರದರ್ಶನವಿರುತ್ತದೆ. ರಾತ್ರಿ 9.00 ಗಂಟೆಗೆ ಮೈಸೂರಿನ ಡಾ. ಕಾ. ರಾಮೇಶ್ವರಪ್ಪ ಮತ್ತು ತಂಡದವರಿಂದ ಜನಪದವೇ ಸತ್ಯ, ಜನಪದವೇ ನಿತ್ಯ ಎಂಬ ಸಾಂಸ್ಕೃತಿಕ ಕಾರ್ಯಕ್ರಮವಿರುತ್ತದೆ.


# ಇದು ಬರಿ ಜಾತ್ರೆಯಲ್ಲೋ ಅಣ್ಣಾ...



ಕೃಷಿ ವಿಚಾರಸಂಕಿರಣ ಮತ್ತು ಗಾಳಿಪಟ ಉದ್ಘಾಟನಾ ಸಮಾರಂಭದಲ್ಲಿ ಸಮ್ಮುಖವಹಿಸಿದ್ದ ಹೊಸದುರ್ಗ ಶ್ರೀ ಭಗೀರಥ ಉಪ್ಪಾರ ಪೀಠದ ಜಗದ್ಗುರು ಡಾ. ಶ್ರೀ ಪುರುಷೋತ್ತಮಾನಂದ ಪುರಿ ಮಹಾಸ್ವಾಮಿಗಳು ಸುತ್ತೂರು ಜಾತ್ರೆಯು ಬರಿ ಜಾತ್ರೆಯಲ್ಲ, ನಮ್ಮ ಭಾರತೀಯ ಸಂಸ್ಕೃತಿಯ ಮಹೋತ್ಸವವಾಗಿದೆ. ಇಲ್ಲಿ ಧಾರ್ಮಿಕ, ಸಾಮಾಜಿಕ, ಭಾವೈಕ್ಯತೆಯಿಂದ ಕೂಡಿರುವ ಸಭಾವೇದಿಕೆಯಾಗಿದೆ. ಅನ್ನ, ಅಕ್ಷರ, ಜ್ಞಾನ ದಾಸೋಹ ಸೇರಿದಂತೆ ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ಒಳಗೊಂಡ ಸೇವೆಯನ್ನು ಶ್ರೀಮಠ ನೀಡುತ್ತಾ ಬಂದಿದೆ. ಜಾತ್ರೆಯು ಕಲೆ, ಸಂಸ್ಕೃತಿ, ಸಂಗೀತ, ಶಿಕ್ಷಣ ಇನ್ನಿತರ ವಿಷಯಗಳನ್ನು ಒಳಗೊಂಡಿದೆ.

ನಮ್ಮ ದೇಶವು ಕೃಷಿ ಪ್ರಧಾನ ದೇಶವಾಗಿದ್ದು, ದೇಶಕ್ಕೆ ಅನ್ನ ನೀಡುವ ರೈತನು ದುಡಿಮೆಯೇ ದೇವರು ಎಂದು ಬದುಕುವವನು. ಆದರೆ ರೈತರು ಬೆಳೆದ ಬೆಳೆಗಳಿಗೆ ಇತ್ತೀಚೆಗೆ ಸರಿಯಾದ ಬೆಲೆ ಸಿಗುತ್ತಿಲ್ಲ, ಸರ್ಕಾರವು ಸರಿಯಾದ ಬೆಲೆ ನಿಗದಿ ಮಾಡಬೇಕು ಎಂದರು. ನಾವು ವ್ಯವಸಾಯದಲ್ಲಿ ಹೆಚ್ಚಾಗಿ ರಾಸಾಯನಿಕ ಬಳಸದೆ ಸಾವಯವ ಕೃಷಿಯನ್ನು ಮಾಡುವುದು ಉತ್ತಮ, ಇದಕ್ಕೆ ಪಶುಸಂಗೋಪನೆ ಮಾಡುವುದರಿಂದ ದನದ ಗೊಬ್ಬರ ಸಾವಯವ ಕೃಷಿಗೆ ಸಿಗುತ್ತದೆ. ಇಂದು ನಮಗೆ ಹೆಚ್ಚಿನ ಅವಶ್ಯಕತೆಯಿರುವುದು ನೀರು, ಆದರೆ ಯಾರು ಕೂಡ ಜಲದ ರಕ್ಷಣೆ ಮಾಡುತ್ತಿಲ್ಲ,

ಹೀಗೆಯೇ ಮುಂದುವರೆದರೆ ಜಲಕ್ಷಾಮ ತಲೆದೋರಿದ್ದು, ಅದಕ್ಕಾಗಿ ಸರಿಯಾದ ರೀತಿಯಲ್ಲಿ ಮಿತವಾಗಿ ನೀರನ್ನು ಬಳಸಬೇಕೆಂದರು. ನಮ್ಮ ದೇಶವು ಧರ್ಮಭೂಮಿ, ಪುಣ್ಯಭೂಮಿ, ತಪೋಭೂಮಿ, ನಾವು ಆದರ್ಶವಾಗಿ ಮೌಲ್ಯಯುತವಾಗಿ ಧರ್ಮದಿಂದ ಬದುಕಿದರೆ ಒಳ್ಳೆಯ ಜೀವನ ನಡೆಸಬಹುದು ಎಂದು ಹೇಳಿ, ಶ್ರೀಮಠದ ಕಾರ್ಯವನ್ನು ಪ್ರಶಂಸಿಸಿದರು. **– ತೇಜ**



ಶುಕ್ರವಾರ ರಾತ್ರಿ ಶ್ರೀಮಠದಿಂದ ಹೊರಟ ಶ್ರೀ ಮಹದೇಶ್ವರರ ಮುತ್ತಿನಪಲ್ಲಕ್ಕಿ ಉತ್ಸವ... ಜಗದ್ಗುರುಗಳವರು, ವಾಟಾಳು ಶ್ರೀಗಳು, ಕನಕಪುರ ಕಿರಿಯ ಶ್ರೀಗಳು, ಶ್ರೀ ಜಯರಾಜೇಂದ್ರರು, ದಂಡಿಕೆರೆ ಶ್ರೀಗಳು, ಹರಗುರುಚರಮೂರ್ತಿಗಳು ಮೊದಲಾದವರು

# ಜಲಸಂಪನ್ಮೂಲದ ಸದ್ಬಳಕೆ ಇಂದಿನ ಅಗತ್ಯ



ಕೃಷಿ ವಿಚಾರಸಂಕಿರಣ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀ ಅಭಿರಾಂ ಜಿ ಶಂಕರ್‌ರವರು ಮಾತನಾಡಿ, ಸಾವಯವ ಕೃಷಿಯಲ್ಲಿ ಸಾಧನೆ ಮಾಡಿ ಲಾಭ ಕಂಡುಕೊಂಡಿರುವ ಪ್ರಗತಿಪರ ರೈತರು ಇತರರಿಗೆ ಮಾದರಿಯಾಗಿದ್ದಾರೆ. ಆದರೆ ಜಲಸಂಪನ್ಮೂಲವನ್ನು ಸದ್ಬಳಕೆ ಮಾಡುವ ಹಾಗೂ ಅಂತರ್ಜಲವನ್ನು ಕಾಪಾಡುವ ಹೊಣೆಗಾರಿಗೆ ನಮ್ಮೆಲ್ಲರದ್ದಾಗಿದೆ. ಇತ್ತೀಚಿನ ದಿನಗಳಲ್ಲಿ ಕೆರೆಕಟ್ಟೆಗಳನ್ನು ಮುಚ್ಚಿ ಬಡಾವಣೆಗಳನ್ನು ನಿರ್ಮಿಸಲಾಗಿದೆ. ಮತ್ತು ಅಲ್ಲಲ್ಲಿ ಕೊಳವೆ ಬಾವಿಗಳನ್ನು ಕೊರೆಯಿಸಿದ್ದರಿಂದ ಎಷ್ಟೇ ಮಳೆಯಾದರೂ ಭೂಮಿಯ ಆಳದಲ್ಲಿ ನೀರಿನ ಸಂಗ್ರಹವಿಲ್ಲ ಇದರ ಪರಿಣಾಮ ಜಾಗತಿಕ ತಾಪಮಾನ ಹೆಚ್ಚಾಗಿ ನದಿ ಕೊಳ್ಳಗಳು ಬತ್ತಿಹೋಗುತ್ತಿವೆ.

ಈ ಎಲ್ಲ ಕಾರಣಗಳಿಂದ ಹವಾಮಾನ ವೈಪರಿತ್ಯ ಉಂಟಾಗಿದೆ. ಆದುದರಿಂದ ಜಲಸಂಪನ್ಮೂಲದ ಹಾಗೂ ಅಂತರ್ಜಲದ ಸದ್ಬಳಕೆ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕೆಲಸ ಅತ್ಯಂತ ಜರೂರಾಗಿ ಆಗಬೇಕಾಗಿದೆ ಎಂದರು. – ಕೆ.ಪಿ. ದೀಪಶ್ರೀ

# ಆರೋಗ್ಯ ಮತ್ತು ಶಿಕ್ಷಣಕ್ಕೆ ಪ್ರಾಮುಖ್ಯತೆ

## ಶ್ರೀ ಅನಿಲ್‌ಕುಮಾರ್ ಚಿಕ್ಕಮಾದು



ಕೃಷಿ ವಿಚಾರಸಂಕಿರಣ ಮತ್ತು ಗಾಳಿಪಟ ಸ್ಪರ್ಧೆಯ ಉದ್ಘಾಟನಾ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿದ್ದ ಶಾಸಕರಾದ ಶ್ರೀ ಅನಿಲ್‌ಕುಮಾರ್ ಚಿಕ್ಕಮಾದುರವರು ಮಾತನಾಡಿ ಎರಡು ವರ್ಷಗಳಿಂದ ನಾನು ಜಾತ್ರೆಗೆ ಬರುತ್ತಿದ್ದೇನೆ, ಮೊದಲು ಭಕ್ತನಾಗಿ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಿದ್ದೆ. ಶ್ರೀಕ್ಷೇತ್ರದ ಋಣ ನಮ್ಮ ಮೇಲಿದೆ. ಏಕೆಂದರೆ ನನ್ನ ತಂದೆ ಚಿಕ್ಕಮಾದುರವರು ಜೆಎಸ್‌ಎಸ್ ಶಾಲೆಯಲ್ಲೇ ವಿದ್ಯಾಭ್ಯಾಸ ಪಡೆದವರು. ಇಲ್ಲಿ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಒತ್ತು ನೀಡುವುದರ ಮೂಲಕ ಆರುದಿನಗಳ ಕಾಲ ಜಾತ್ರೆ ನಡೆಯುತ್ತದೆ. ಸಂಸ್ಥೆಯು ಆರೋಗ್ಯ ಮತ್ತು ಶಿಕ್ಷಣಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿ ಜನೋ ಪಯೋಗಿಯಾಗಿದೆ.

ಹೆಚ್. ಡಿ. ಕೋಟೆ ತಾಲ್ಲೂಕು ಆರ್ಥಿಕವಾಗಿ ಹಿಂದುಳಿದ ಪ್ರದೇಶವಾಗಿದೆ, ಆದರೂ ಅಲ್ಲಿಯೂ ಕೂಡ ಸ್ವಾಮೀಜಿಯವರು ತಮ್ಮ ಸಂಸ್ಥೆಯ ಶಾಲಾ–ಕಾಲೇಜುಗಳನ್ನು ತೆರೆದಿದ್ದಾರೆ. ಇನ್ನೂ ಕೆಲವು ಶಾಲೆಗಳನ್ನು ತಮ್ಮ ತಾಲ್ಲೂಕಿನಲ್ಲಿ ದತ್ತು ಪಡೆಯಬೇಕೆಂದು ಶ್ರೀಗಳಲ್ಲಿ ಮನವಿ ಮಾಡಿಕೊಂಡರು. – ದೀಪಶ್ರೀ ಕೆ.ಪಿ.

# ಚದುರಂಗದಾಟದಲ್ಲಿ ಚತುರೆಯರು...






ಪರಮಪೂಜ್ಯರು, ಡಾ. ಶ್ರೀ ಪುರುಷೋತ್ತಮಾನಂದಪುರಿ ಮಹಾಸ್ವಾಮಿಗಳವರು, ಶ್ರೀ ಅಲ್ಲಮಪ್ರಭು ಸ್ವಾಮಿಗಳು, ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ, ಶ್ರೀ ಸಿದ್ದರಾಜು ಶ್ರೀ ರುದ್ರೇಗೌಡ, ಶ್ರೀ ಪ್ರತಾಪ್ ಸಿಂಹ, ಶ್ರೀ ನಾಗೇಶ್ ಹಾಗೂ ಗಣ್ಯರೊಂದಿಗೆ ಬಹುಮಾನ ವಿಜೇತರಾದ ಪ್ರಗತಿಪರ ರೈತರು.

ಛಾಯಾಚಿತ್ರಗಳು: ವಾಟಾಳ್ ಆನಂದ್, ಬಿ.ಎನ್. ನಿಜಲಿಂಗಪ್ಪ, ಜಿ.ಎಸ್. ಜಯಶಂಕರಸ್ವಾಮಿ, ಮಂಜುನಾಥ್, ಸುತ್ತೂರು ನಂಜುಂಡನಾಯಕ

# ಕೃಷಿಗೆ ಜಲಸಂರಕ್ಷಣೆ ಮುಖ್ಯ

ಕೃಷಿ ವಿಚಾರಸಂಕಿರಣದ ಸಮಾರೋಪ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಕೋಲಾರ ಪ್ರಗತಿಪರ ಕೃಷಿಕರಾದ **ಶ್ರೀ ಎಸ್. ಅಶೋಕ್‌ಕುಮಾರ್**‌ರವರು ಭಾರತ ಸಾವಿರಾರು ವರ್ಷಗಳ ಇತಿಹಾಸವನ್ನು ಹೊಂದಿದೆ. ರಾಜ್ಯ ತನ್ನದೇ ಆದಂತಹ ಭೌಗೋಳಿಕ ಹಾಗೂ ಉತ್ತಮದ ವಾತಾವರಣದ ಅಂಶಗಳನ್ನು ಹೊಂದಿರುವ ಭೂಪ್ರದೇಶ ಎಂದರೆ ತಪ್ಪಾಗಲಾರದು. ಎಲ್ಲಾ ಸಂದಿಗ್ದ ಪರಿಸ್ಥಿತಿಗಳನ್ನು ಎದುರಿಸುವಂತಹ ರೈತ ಕೋಟಿ ಕೋಟಿ ಜನರಿಗೆ ಅನ್ನ ನೀಡುತ್ತಿದ್ದು, ರೈತ "ಅನ್ನ ದೇವರು" ಎಂದು ಕರೆಯಿಸಿಕೊಂಡದ್ದು ಕಡಿಮೆ. ರೈತನ ಬೆಳೆಗೆ ಮೂಲಾಧಾರ ನೀರು, ನೀರಿನ ಮೂಲ ಮಳೆ, ಅದನ್ನು ಅರಿತರೆ ಜಾಗ್ರತೆವಹಿಸಿದರೆ ನೀರಿಗಾಗಿ ಯಾವುದೇ ಕಷ್ಟ ಇರುವುದಿಲ್ಲ. ಅನೇಕ ದಶಕಗಳಿಂದ ಮನುಷ್ಯ ತಾನು ಮಾಡಿದ ದೌರ್ಜನ್ಯದಿಂದ ಪರಿಸರ ಬೇಸತ್ತು ಅದನ್ನು ಬಡ್ಡಿ ಸಮೇತ ಮನುಷ್ಯನಿಗೆ ವಾಪಸ್ಸು ಕೊಡುತ್ತಿದೆ. ಬೆಳೆಯ ಮೂಲ ನೀರಾದ್ದರಿಂದ ಮಳೆಯ ನೀರನ್ನು ಸಂಗ್ರಹಿಸಬೇಕು, ಸಂಗ್ರಹಣೆ ಮಾಡಿದ ನೀರನ್ನು ವೈಜ್ಞಾನಿಕವಾಗಿ ಬಳಕೆ ಮಾಡಬೇಕು. ಅದರ ಜೊತೆಗೆ ಜಲದ ಮರುಬಳಕೆ ತುಂಬಾ ಮುಖ್ಯವಾಗಿ ಆಗಬೇಕು. ಮಳೆಯ ಏರಿಳಿತಗಳನ್ನು ಸರಿಮಾಡಬೇಕಾದರೆ ಪರಿಸರ ನಾಶವನ್ನು ತಡೆಯಬೇಕು. ಭೂಗರ್ಭದ ಅಂತರ್ಜಲವನ್ನು ಹೆಚ್ಚು ಮಾಡಬೇಕಾದರೆ ಅಣೆಕಟ್ಟುಗಳು, ಸಣ್ಣ ಕೃಷಿ ಹೊಂಡಗಳನ್ನು ತೆರೆಯಬೇಕು. ನೀರನ್ನು ಮಿತಬಳಕೆ ಮಾಡುವುದರಿಂದ ಮುಂದಿನ ಪೀಳಿಗೆಗೆ ಉಪಯೋಗಕರವಾಗುತ್ತದೆ. ಆಹಾರ ನೀರು, ಗಾಳಿ, ಮೂರು ಮಾಲಿನ್ಯವಾಗದಿದ್ದರೆ ಅದ್ಭುತವಾದಂತಹ ದೇಶ ಕಟ್ಟಬಹುದು. ಎಲ್ಲಿ ಅನಾರೋಗ್ಯ ಹೆಚ್ಚಾಗುತ್ತದೆ ದೇಶದ ಆರ್ಥಿಕ ಮುನ್ನಡೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನಾವು ಸಾವಯವ ಕೃಷಿಯನ್ನು ಬೆಳೆಸಬೇಕು ಎಂದು ಸಲಹೆ ನೀಡುತ್ತಾ, ಶ್ರೀಮಠದ ಕಾರ್ಯಕ್ರಮಗಳನ್ನು ಶ್ಲಾಘಿಸಿದರು.

– ಸಂಕ್ರಾಂತಿ ಬಸವಟ್ಟಿ

# ಕಾಂಪೋಸ್ಟ್ ಗೊಬ್ಬರ ಬೆಸ್ಟ್!

ಕೃಷಿ ವಿಚಾರಸಂಕಿರಣ ಸಮಾರೋಪದಲ್ಲಿ ಉಪನ್ಯಾಸ ನೀಡಿದ ತುಮಕೂರು ಪ್ರಗತಿಪರ ಕೃಷಿಕರಾದ ಶ್ರೀ **ಮಹಾಲಿಂಗಯ್ಯನವರು**. ಒಂದು ಹಲಸಿನ ಎಲೆಗೂ ಅದರದೇ ಆದ ಬೆಲೆಯಿದೆ, ಏಕೆಂದರೆ ಎಲ್ಲಾ ತರಹದ ಎಲೆಗಳನ್ನು ಸುಡುವ ಬದಲು ಮಣ್ಣಿನಲ್ಲಿ ತೇವಾಂಶದೊಂದಿಗೆ ಹೂತುಹಾಕಿದರೆ ಗೊಬ್ಬರವಾಗುತ್ತದೆ. ಇದರ ಪ್ರಯೋಜನವನ್ನು ರೈತರು ಪಡೆಯಬಹುದು.

ಹರಿಯಾಣ, ಪಂಜಾಬ್ ಇತರ ರಾಜ್ಯಗಳಲ್ಲಿ ಹುಲ್ಲುಕಡ್ಡಿಗಳನ್ನು ಸುಟ್ಟು ಅನವಶ್ಯಕವಾದ ತೊಂದರೆಗಳನ್ನುಂಟು ಮಾಡುತ್ತಿದ್ದಾರೆ. ಇಂತಹ ತೊಂದರೆಗಳಿಂದ ಹೊರ ಬರಲು ರೈತರು ಅನವಶ್ಯಕ ಬೆಳೆಗಳ ಪದಾರ್ಥಗಳನ್ನು ಭೂಮಿಯಲ್ಲಿ ಕೊಳೆಯಿಸಿ ಗೊಬ್ಬರ ಮಾಡಿದರೆ ಭೂಮಿ ಹಸನಾಗುತ್ತದೆ. ಇದರಿಂದ ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ಕಡಿಮೆ ಮಾಡಬಹುದು. ಬೆಳೆಯಲ್ಲಿ ಬರುವ ಕಳೆಗಳನ್ನು ಕಿತ್ತು ಅವುಗಳನ್ನು ಮತ್ತೆ ಮಣ್ಣಾಗಿಸುವ ಪ್ರಯತ್ನ ಮಾಡಬೇಕಾಗಿದೆ.

ಬೆಳೆಗಳಿಗೆ ಕೀಟನಾಶಕಗಳನ್ನು ಬಳಸದೆ ಸಾವಯವ ಪದ್ಧತಿಯಲ್ಲಿ ಬೆಳೆ ಬೆಳೆಯಲು ರೈತರು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಇದರ ಜೊತೆ ನೀರಿನ ಸಂರಕ್ಷಣೆಗಾಗಿ ಕೆರೆ, ಕಟ್ಟೆಗಳ ಮೂಲಕ ಭೂಮಿಯ ತೇವಾಂಶವನ್ನು ಹೆಚ್ಚಿಸಬೇಕು. ಕಾಡನ್ನು ಉಳಿಸಿದರೆ ನಾಡನ್ನು ಉಳಿಸಿದಂತೆ ಇದರ ಬಗ್ಗೆ ಯುವಕರು ರೈತರು ಜಾಗೃತರಾಗಬೇಕೆಂದರು.

**– ಅನನ್ಯ.ಜಿ.ಎಸ್**

# ಡ್ರೋನ್ ಕ್ಯಾಮರಾ ಕಣ್ಣಲ್ಲಿ ಲಕ್ಷದೀಪೋತ್ಸವ



Printed by : Academy Newspapers Private Limited (Publishers of Star of Mysore and Mysooru Mithra)
15-C, Industrial 'A' Layout, Bannimantap, Mysore-570 015